# KARNATAKA LOKAYUKTA

No.UPLOK-2/DE.297/2015/ARE-14

Multi Storied Building,
Dr. B.R. Ambedkar Veedhi,
Bengaluru-560 001.
Dated 22.12.2021.

## RECOMMENDATION

Sub:- Departmental inquiry against Shri Basavaraju.H.B., Deputy Tahasildar, Nada Kacheri, Huliyaru, Chikkanayakanahalli Taluk, Tumkur District - reg.

Ref:- 1) Government Order No.RD 130 BMM 2015 dated 04.05.2015.

2) Nomination order No. UPLOK-2/DE.297/2015 dated 08.06.2015 of Upalokayukta, State of Karnataka.

3) Inquiry report dated 20.12.2021 of Additional Registrar of Enquiries-14, Karnataka Lokayukta, Bengaluru.

~~~~~

The Government by its order dated 04.05.2015 initiated the disciplinary proceedings against Shri Basavaraju.H.B., Deputy Tahasildar, Nada Kacheri, Huliyaru, Chikkanayakanahalli Taluk, Tumkur District, [hereinafter referred to as Delinquent Government Official, for short as 'DGO'] and entrusted the departmental inquiry to this Institution.
~~~~~

2. This Institution by Nomination Order No. UPLOK-2/DE.297/2015 dated 08.06.2015 nominated Additional Registrar of Enquiries-6, Karnataka Lokayukta, Bengaluru, as the Inquiry Officer to frame charges and to conduct departmental inquiry against DGO for the alleged charge of misconduct, said to have been committed by him. Subsequently, the matter was transferred to ARE-1, then to ARE.7 and finally to ARE-14 to continue the said enquiry.

3. The DGO was tried for the charge of demanding and accepting bribe of Rs.2,800/- from complainant for issuing agriculturist certificate and thereby committed misconduct.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the above charge against the DGO Shri Basavaraju.H.B., Deputy Tahasildar, Nada Kacheri, Huliyaru, Chikkanayakanahalli Taluk, Tumkur District, is ' not proved'.

5. On re-consideration of report of inquiry and all other materials on record, I do not find any reason to interfere with

the findings recorded by the Inquiry Officer. Therefore, it is hereby recommended to the Government to accept the report of Enquiry Officer and exonerate DGO Shri Basavaraju.H.B., Deputy Tahasildar, Nada Kacheri, Huliyaru, Chikkanayakanahalli Taluk, Tumkur District, of the charges leveled against him.

6. Action taken in the matter shall be intimated to this Authority.

Connected records are enclosed herewith.

22/12/21

**(JUSTICE B.S.PATIL)**
Upalokayukta,
State of Karnataka.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ-297/2015/ಎ.ಆರ್.ಇ-14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 20/12/2021.

## ವಿಚಾರಣಾ ವರದಿ

ಉಪಸ್ಥಿತರು: **ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

ವಿಷಯ: ಆ.ಸ.ನೌಕರ ಶ್ರೀ. **ಹೆಚ್.ಬಿ ಬಸವರಾಜು,** ಉಪ ತಹಶೀಲ್ದಾರ್, ನಾಡ ಕಛೇರಿ, ಹುಳಿಯಾರು, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ:

1. ಕಂಪ್ಲೆಂಟ್/ಉಪಲೋಕ್/ಬಿಡಿ/227/2015/ಎ.ಆರ್.ಎಲ್.ಓ-2 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 23/03/2015.
2. ಸರ್ಕಾರದ ಆದೇಶ ಸಂಖ್ಯೆ: ಕಂಇ 130 ಬಿಎಂಎಂ 2015, ಬೆಂಗಳೂರು, ದಿನಾಂಕ: 04/05/2015.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/297/2015, ಬೆಂಗಳೂರು ದಿನಾಂಕ: 08/06/2015.
4. Order No.UPLOK-2/DE/2016 Bangalore, Dtd: 03/08/2016 file is transferred from ARE-6 to ARE-1.
5. Order No.UPLOK-1/DE/2017 Bangalore, Dtd: 06/07/2017 file transferred from ARE-1 to ARE-7.
6. Order No.UPLOK-1&2/DE/Transfers/2018 Bengaluru, Dtd: 06/08/2018 file is transferred from ARE-7 to ARE-14.

* * * * * *

ಮಾನ್ಯ ಅಪರ ಪೋಲಿಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ತುಮಕೂರು ಲೋಕಾಯುಕ್ತ ಪೋಲಿಸ್ ನಿರೀಕ್ಷಕರು (ಇನ್ನು ಮುಂದೆ "ತನಿಖಾಧಿಕಾರಿ" ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯನ್ವಯ ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ಹುಳಿಯೂರು ನಾಡಕಛೇರಿಯ ಉಪ ತಹಶೀಲ್ದಾರ್‌ರಾದ **ಶ್ರೀ. ಹೆಚ್.ಬಿ ಬಸವರಾಜು,** ಉಪ ತಹಶೀಲ್ದಾರ್, ನಾಡ ಕಛೇರಿ, ಹುಳಿಯಾರು, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರ "ಆ.ಸ.ನೌ" ಎಂದು ಕರೆಯಲ್ಪಡುತ್ತಾರೆ) ರವರು ದೂರುದಾರಾದ **ಶ್ರೀ. ನವೀನ್ ಕುಮಾರ್** ತಂದೆ ಗೋವಿಂದ ಭೋವಿ, ಬಡಕೆಗುಡ್ಲು, ಕಂದಿಕೆರೆ ಹೋಬಳಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣವನ್ನು ಪಡೆದು ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2) ರನ್ವಯ ತನಿಖೆಯನ್ನು ಕೈಗೊಂಡಿದ್ದು ಇರುತ್ತದೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 04/05/2015ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 08/06/2015 ರಂದು ಅಪರ ನಿಬಂಧಕರು, ವಿಚಾರಣೆಗಳು-6 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು, ಉಲ್ಲೇಖ (4) ರಂತೆ ಅಪರ ನಿಬಂಧಕರು ವಿಚಾರಣೆಗಳು-6 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು-1 ರವರಿಗೆ ವರ್ಗಾವಣೆಗೊಂಡಿರುತ್ತದೆ. ನಂತರ ಉಲ್ಲೇಖ (5) ಅಪರ ನಿಬಂಧಕರು ವಿಚಾರಣೆಗಳು-1 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು-7 ರವರಿಗೆ ವರ್ಗಾವಣೆಗೊಂಡಿದ್ದು,

ಪುನಃ ಉಲ್ಲೇಖ (6) ರಂತೆ ಅಪರ ನಿಬಂಧಕರು ವಿಚಾರಣೆಗಳು–7 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು–14 ರವರಿಗೆ ವರ್ಗಾವಣೆಗೊಂಡಿರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, **ಆ.ಸ.ನೌ ಶ್ರೀ. ಹೆಚ್.ಬಿ ಬಸವರಾಜು, ಉಪ ತಹಶೀಲ್ದಾರ್, ನಾಡ ಕಛೇರಿ, ಹುಳಿಯಾರು, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ರವರ ವಿರುದ್ಧ ದೋಷಾರೋಪಣೆ *(Articles of Charge)* ಅನ್ನು ಅಪರ ನಿಬಂಧಕರು ವಿಚಾರಣೆಗಳು–6 ರವರು ರಚಿಸಿದ್ದು,** ಸದರಿ ದೋಷಾರೋಪಣೆಯು ಅನುಬಂಧ–1 ಮತ್ತು ಅನುಬಂಧ–2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 06/07/2015 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ಅನುಬಂಧ–1

## ದೋಷಾರೋಪಣೆ

ನೀವು ಹೆಚ್. ಬಿ. ಬಸವರಾಜು, (ಇನ್ನು ಮುಂದೆ ಆಪಾದಿತ ನೌಕರರು ಅಂದರೆ ಆ.ಸ.ನೌ ಎಂದು ಸಂಭೋದಿಸಲಾಗುವ) ತುಮಕೂರು ಜಿಲ್ಲೆಯ ಚಿಕ್ಕನಾಯಕನ ಹಳ್ಳಿ ತಾಲೂಕಿನ ಹುಲಿಯಾರುನಲ್ಲಿರುವ ನಾಡ ಕಛೇರಿಯಲ್ಲಿ ಉಪ–ತಹಶೀಲದ್ದಾರರಾಗಿ 2013ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಚಿಕ್ಕನಾಯಕನಹಳ್ಳಿ ತಾಲೂಕಿನ ಕಂದಿಕೆರೆ ಹೋಬಳಿಯ ಬಡಕೆಗುಡ್ಲು ಗ್ರಾಮದ ಶ್ರೀ. ನವೀನ್ ಕುಮಾರ್ ತಂದೆ ಗೋವಿಂದ ಭೋವಿ (ಇನ್ನು ಮುಂದೆ ದೂರುದಾರರು ಎಂದು ಸಂಭೋದಿಸಲಾಗುವ)ರವರು ತಮ್ಮ ತಂದೆಯವರ ಹೆಸರಿನಲ್ಲಿ ಚಿಕ್ಕನಾಯಕನ ಹಳ್ಳಿ ತಾಲೂಕಿನ ಹುಲಿಯಾರು ಹೋಬಳಿಯ ಕುರಿಹಳ್ಳಿವಾವನಲ್ಲಿದ್ದ ಕೃಷಿ ಜಮೀನು ಸ.ನಂ. 1/3 2 ವಿಸ್ತೀರ್ಣ 4 ಎಕರೆ 38 ಗುಂಟೆ ಜಮೀನು ಇರುವ ಕಾರಣ ಬೇರೆ ಕೃಷಿ ಜಮೀನು ಖರೀದಿಯ ಸಲುವಾಗಿ ಅವಶ್ಯವಿದ್ದ ಅವರು ವ್ಯವಸಾಯ ಕುಟುಂಬದವರಿದ್ದ ಬಗ್ಗೆ ದೃಢೀಕರಣ ಪತ್ರ ನೀಡಲು ದಿನಾಂಕ

18.09.2013ರಂದು ನಿಮ್ಮನ್ನು ಸಂಪರ್ಕಿಸಿದಾಗ ನೀವು ಅವರಿಗೆ ಅವರು ಕೋರಿದ ದೃಢೀಕರಣ ದಾಖಲೆ ನೀಡಲು ರೂ. 3000/- ಲಂಚದ ಬೇಡಿಕೆ ಇಟ್ಟು ನಂತರ ರೂ. 2800/- ಪಡೆದು ದೃಢೀಕರಣ ದಾಖಲೆ ನೀಡಲು ಒಪ್ಪಿಕೊಂಡಿದ್ದಿರಿ.

ದಿನಾಂಕ 19.09.2013ರಂದು ನೀವು ಚಿಕ್ಕನಾಯಕನ ಹಳ್ಳಿ ಪಟ್ಟಣದ ನೆಹರು ಸರ್ಕಲ್ ಬಳಿಯ ಶ್ರೀದೇವಿ ಹೋಟೇಲ್‌ನಲ್ಲಿ ದೂರುದಾರರಿಂದ ಅವರಿಗೆ ಅವರು ಕೋರಿದ ದೃಢೀಕರಣ ಪತ್ರ ನೀಡಲು ರೂ. 2800/- ಲಂಚ ಪಡೆದಿದ್ದಿರಿ.

ನೀವು ದೂರುದಾರರುಣದ ಪಡೆದಿದ್ದ ರೂ. 2800/-ಗಳನ್ನು ತನಿಖಾಧಿಕಾರಿಯವರು ಪಂಚ ಸಾಕ್ಷಿಗಳ ಉಪಸ್ಥಿತಿಯಲ್ಲಿ ನಿಮ್ಮ ವಶದಿಂದ ವಶಪಡಿಸಿಕೊಳ್ಳಲಾಗಿ. ನೀವು ಆ ಹಣ ನಿಮ್ಮ ಬಳಿ ಇರುವುದಕ್ಕೆ ಯಾವುದೇ ಸೂಕ್ತ ಸಮಜಾಯಿಷಿ ನೀಡಲು ವಿಫಲರಾಗಿದ್ದೀರಿ.

ಈ ಪ್ರಕಾರ, ನೀವು ಪರಿಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ಸರ್ಕಾರಿ ಸೇವಾ (ಸದ್ವರ್ತನೆ) ನಿಯಮಾವಳಿ 1966ರ (3)(i)(ii) ಮತ್ತು (iii) ರಡಿಯಲ್ಲಿ ಉತ್ತವಾದ ದುರ್ನಡತೆ ಎಸಗಿರುವಿರಿ.

## ಅನುಬಂಧ-2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸಕಾಂಡೆಕ್ಟ್)

ಫಿರ್ಯಾದುದಾರರಾದ ಶ್ರೀ ನವೀನ್‌ಕುಮಾರ್ ಬಿನ್ ಗೋವಿಂದಾಬೋವಿ, ಜಿರಾಯ್ತಿ, ಬಡಕೆಗುಡ್ಲು, ಗ್ರಾಮ ಕಂದಿಕೆರೆ ಹೋಬಳಿ, ಚಿಕ್ಕನಾಯಕನಹಳ್ಳಿ ತಾಲೂಕಾ, ತುಮಕೂರು ಜಿಲ್ಲೆ ತಮ್ಮ ತಂದೆಯವರ ಹೆಸರಿನಲ್ಲಿ ಚಿಕ್ಕನಾಯಕನ ಹಳ್ಳಿ ತಾಲೂಕಿನ ಹುಲಿಯಾರು ಹೋಬಳಿಯ ಕುರಿಹಳ್ಳಿವಾವನಲ್ಲಿದ್ದ ಕೃಷಿ ಜಮೀನಿನ

ಸ.ನಂ. 1/3 2 ವಿಸ್ತೀರ್ಣ 4 ಎಕರೆ 38 ಗುಂಟೆ ಜಮೀನು ಇರುವ ಕಾರಣ ಬೇರೆ ಕೃಷಿ ಜಮೀನು ಖರೀದಿಯ ಸಲುವಾಗಿ ಅವಶ್ಯವಿದ್ದ ಅವರು ವ್ಯವಸಾಯ ಕುಟುಂಬದವರಿದ್ದ ಬಗ್ಗೆ ದೃಢೀಕರಣ ಪತ್ರ ನೀಡಲು ದಿನಾಂಕ 18.09.2013ರಂದು ನಿಮ್ಮನ್ನು ಸಂಪರ್ಕಿಸಿದಾಗ ನೀವು ಅವರಿಗೆ ಅವರು ಕೋರಿದ ದೃಢೀಕರಣ ದಾಖಲೆ ನೀಡಲು ರೂ. 3000/- ಲಂಚದ ಬೇಡಿಕೆ ಇಟ್ಟು ನಂತರ ರೂ. 2800/- ಪಡೆದು ದೃಢೀಕರಣ ದಾಖಲೆ ನೀಡಲು ಒಪ್ಪಿಕೊಂಡಿದ್ದೀರಿ. ನಿಮಗೆ ಲಂಚ ಕೊಡಲು ಇಷ್ಟವಿಲ್ಲದ ಕಾರಣ, ದೂರುದಾರರು ದಿ.18/09/2013ರಂದು ತುಮಕೂರು ಲೋಕಾಯುಕ್ತ ಕಛೇರಿಯಲ್ಲಿ ಹಾಜರಾಗಿ ಅ.ಸ.ನೌ ರವರ ವಿರುದ್ಧ ದೂರನ್ನು ದಾಖಲಿಸಿರುತ್ತಾರೆ. ಈ ದೂರಿನ ಆಧಾರದ ಮೇಲೆ ಮೊ.ಸಂ. 12/2013 ಕಲಂ 7, 13(1)(ಡಿ) ಸಹವಾಚಕ 13 (2) ಲಂಚ ನಿರೋಧ ಕಾಯ್ದೆ 1988 ರಂತೆ ಪ್ರಕರಣವನ್ನು ದಿ. 18/09/2013 ರಂದು ದಾಖಲು ಮಾಡಿಕೊಂಡಿದ್ದು, ಪಂಚರನ್ನಾಗಿ 1. ಶ್ರೀ. ಟಿ. ಜಿ. ದಯಾಬಂಧು ಬಿನ್ ಲೇಟ್. ಓ. ಆರ್. ಗಂಗಣ್ಣ, ಪ್ರ.ದ.ಸ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ತುಮಕೂರು. 2. ಶ್ರೀ. ಆರ್. ಪ್ರಕಾಶ್ ಬಿನ್ ಲೇ. ರಂಗಪ್ಪ, ದ್ವಿ.ದ.ಸ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ತುಮಕೂರು ವಿಭಾಗ, ತುಮಕೂರು ಇವರುಗಳನ್ನು ಕರೆಸಿಕೊಂಡು ಟ್ರ್ಯಾಪ್ ಪಂಚನಾಮೆಯನ್ನು ನಿರ್ವಹಿಸಿ, ದಿನಾಂಕ 19/09/2013ರಂದು ಚಿಕ್ಕನಾಯಕನಹಳ್ಳಿಯ ನೆಹರು ಸರ್ಕಲ್ ಬಳಿಯ ಶ್ರೀದೇವಿ ಹೋಟೇಲ್‌ಗೆ ಟ್ರ್ಯಾಪ್ ತಂಡ, ಪಿರ್ಯಾದಿದಾರರು ಹಾಗು ಪಂಚ ಸಾಕ್ಷಿಗಳೊಂದಿಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ಲಂಚದ ಹಣ ರೂ.2,800/-ಗಳನ್ನು ಸ್ವೀಕರಿಸಿ, ತನ್ಮೂಲಕ ಸಾರ್ವಜನಿಕ ನೌಕರರಾಗಿ ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಶಿಸ್ತು ಕ್ರಮಕ್ಕೆ ಭಾಧ್ಯರಾಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ

ಲೋಕಾಯುಕ್ತ ಕಾಯ್ದೆಯ ಕಲಂ 7(2)ರಡಿಯಲ್ಲಿ ಅ.ಸ.ನೌ ರವರ ವಿರುದ್ಧ ತನಿಖೆಯನ್ನು ಕೈಗೊಂಡು ವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿಕೊಟ್ಟಿದ್ದು, ಆರೋಪಿತ ನೌಕರರು ಕೊಟ್ಟ ಜವಾಬಿನಂತೆ ನಂತರ ಅವರ ವಿರುದ್ಧ ತನಿಖೆಯನ್ನು ಕೈ ಬಿಡಲು ಸೂಕ್ತವಾದ ಆಧಾರಗಳು ಇರುವುದು ಕಂಡುಬಂದಿರುವುದಿಲ್ಲ, ಆದ್ದರಿಂದ ಸಂಗ್ರಹವಾಗಿರುವ ಮಾಹಿತಿ, ದಾಖಲಾತಿಗಳ ಆಧಾರಗಳಿಂದ ಅ.ಸ.ನೌಕರರು ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದಾರೆಂದು ಹಾಗು ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬಹುದೆಂದು ಕಂಡುಬಂದ ಕಾರಣ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಸ್ತು ಪ್ರಾಧಿಕಾರಕ್ಕೆ ಅ.ಸ.ನೌಕರರ ವಿರುದ್ಧ ಶಿಸ್ತು ನಡವಳಿಗಳನ್ನು ಹೂಡಲು ಕರ್ನಾಟಕ ನಾಗರೀಕ ಸೇವಾ ನಿಯಮ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) 1957, ನಿಯಮ 14–ಎ ರಂತೆ ತನಿಖೆಯನ್ನು ಈ ಪ್ರಾಧಿಕಾರಕ್ಕೆ ಒಪ್ಪಿಸಲು ಶಿಫಾರಸ್ಸು ಮಾಡಿದ್ದು, ಸರ್ಕಾರವು ಆದೇಶ ಮಾಡಿ ಅ.ಸ.ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಂಡು ವರದಿ ಸಲ್ಲಿಸಲು ಗೌರವಾನ್ವಿತ ಉಪಲೋಕಾಯುಕ್ತರಿಗೆ ವಹಿಸಿರುತ್ತದೆ. ಆದ್ದರಿಂದ ಈ ದೋಷಾರೋಪಣೆ.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರು ದಿನಾಂಕ: 07/08/2015 ರಂದು ರಂದು ಹಾಜರಾಗಿದ್ದು, ಆ.ಸ.ನೌ.ರವರ ಪ್ರಥಮ ಮೌಖಿಕ ಹೇಳಿಕೆ, ನಿಯಮ–11 ಕೆ.ಸಿ.ಎಸ್. ಸಿಸಿಎ ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು.

7. ಆ.ಸ.ನೌರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ದಿನಾಂಕ: 18/09/2013 ರಂದು ತನ್ನ ಬಳಿ ದೂರುದಾರರ ಯಾವುದೇ ಕೆಲಸವು ಬಾಕಿ ಇರುವುದಿಲ್ಲ ಅಂತಾ ಹೇಳಿರುತ್ತಾರೆ. ಅದೇ ರೀತಿ ದೂರುದಾರರ ಕಡೆಯಿಂದ ವ್ಯವಸಾಯ ಪ್ರಮಾಣ ಪತ್ರವನ್ನು ನೀಡಬೇಕೆಂದು ಯಾವುದೇ ಅರ್ಜಿಯನ್ನು ಪಡೆದಿರುವುದಿಲ್ಲ. ದೂರುದಾರರಿಗೆ ತಾನು ಲಂಚದ ಹಣವನ್ನು ಕೊಡಬೇಕೆಂದು ಕೇಳಿಕೊಂಡಿರುವುದಿಲ್ಲ ಮತ್ತು ದೂರುದಾರರು ತನಗೆ ಎಂದೂ ಭೇಟಿಯಾಗಿರುವುದಿಲ್ಲ ಅಂತಾ ಹೇಳಿರುತ್ತಾರೆ. ಅದೇ ರೀತಿ ತಾನು ಯಾವುದೇ ಕರ್ತವ್ಯಲೋಪ ಎಸಗಿರುವುದಿಲ್ಲ ಎಂದು ಹೇಳಿರುತ್ತಾರೆ.

8. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ತಮ್ಮ ಪರವಾಗಿ ದೂರುದಾರರನ್ನು ರವರನ್ನು ಪಿ.ಡಬ್ಲೂ.1 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.1 ರಿಂದ 6 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ ಹಾಗೂ ನೆರಳು ಸಾಕ್ಷಿದಾರರಾದ ಶ್ರೀ. ಆರ್ ಪ್ರಕಾಶ್ ರವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ನುಡಿಸಿಕೊಂಡು ಹಾಗೂ ತನಿಖಾಧಿಕಾರಿಗಳಾದ ಶ್ರೀ. ಎಂ.ಆರ್ ಗೌತಮ್, ಪೋಲಿಸ್ ನಿರೀಕ್ಷಕರು, ಕ.ಲೋ, ತುಮಕೂರು ಇವರನ್ನು ಪಿ.ಡಬ್ಲೂ.3 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.7 ರಿಂದ 29 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದ್ದು, ನಿ.ಡಿ.1 ಅನ್ನು ಗುರುತಿಸಿಕೊಂಡಿರುತ್ತಾರೆ.

9. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು.

10. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

B

11. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

12. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ನಕಾರಾತ್ಮಕವಾಗಿ.**
**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

13. ಶ್ರೀ. ನವೀನ್ ಕುಮಾರ್ ತಂದೆ ಗೋವಿಂದ ಭೋವಿ, ಬಡಕೆಗುಡ್ಲು, ಕಂದಿಕೆರೆ ಹೋಬಳಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ಇವರು ತಮ್ಮ ದೂರಿನಲ್ಲಿ ಇವರ ತಂದೆ ಗೋವಿಂದ ಭೋವಿ ತಂದೆ ಹನುಮಂತ ಬೋವಿ ರವರ ಹೆಸರಿಗೆ ಹುಳಿಯಾರ ಹೋಬಳಿ, ಕುರಿಹಳ್ಳಿ ಕಾವಲ ಗ್ರಾಮ ಸರ್ವೆ ನಂ.1/3ಪಿ2 ನಲ್ಲಿ 4 ಎಕರೆ 38 ಗುಂಟೆ ಜಮೀನು ಇದ್ದು, ದೂರುದಾರರು ಹೊಸದಾಗಿ ಖರೀದಿಸಲು ಮತ್ತು ನೋಂದಣಿ ಮಾಡಿಸಿಕೊಳ್ಳಲು ವ್ಯವಸಾಯ ಕುಟುಂಬದ ದೃಢೀಕರಣ ಪತ್ರ ಪಡೆಯಲು ಅರ್ಜಿಯನ್ನು ಕೊಡಲು ಹೋದಾಗ, ಆ.ಸ.ನೌ ರವರು ಈ ರೀತಿ ಕೆಲಸ ಮಾಡಲು ದೂರುದಾರರಿಗೆ ರೂ.3000/–ಗಳ ಲಂಚದ ಹಣಕ್ಕೆ ಒತ್ತಾಯಿಸಿ ರೂ.2800/–ಗಳ ಲಂಚದ ಹಣ ನೀಡಲು ಒತ್ತಾಯಿಸಿರುತ್ತಾರೆ.

14. ದೂರುದಾರರು ಲಂಚದ ಹಣ ಕೊಡಲು ಮನಸಿಲ್ಲದ ಕಾರಣ ದಿನಾಂಕ: 18/09/2013 ರಂದು ತುಮಕೂರು ಲೋಕಾಯುಕ್ತ ಪೋಲಿಸ್ ಠಾಣೆಯಲ್ಲಿ ವಿಷಯವನ್ನು ತಿಳಿಸಿದಾಗ ಲಂಚಕ್ಕೆ ಒತ್ತಾಯಿಸುವ ಸಂಭಾಷಣೆಯನ್ನು ದೂರುದಾರರು ತನ್ನ ಸ್ನೇಹಿತನ ಮೊಬೈಲ್‌ನಲ್ಲಿ ಧ್ವನಿ ಮುದ್ರಣ ಮಾಡಕೊಂಡಿದ್ದು ಅದನ್ನು ಪಡೆದುಕೊಂಡು ತುಮಕೂರು ಲೋಕಾಯುಕ್ತ ಠಾಣಾ ಮೊ.ನಂ.12/2013 ಕಲಂ 7, 13(1)(ಡಿ) ಜೊತೆಗೆ 13(2) ಪಿ.ಸಿ. ಕಾಯ್ದೆ 1988 ರೀತ್ಯಾ ಕೇಸು ದಾಖಲಿಸಿರುತ್ತಾರೆ.

15. ಆಪಾದಿತರು ದಿನಾಂಕ: 19/09/2013 ರಂದು ಬೆಳನಾಯಕನ ಹಳ್ಳಿಯ ನೆಹರು ಸರ್ಕಲ್ ಬಳಿ ಇರುವ ಶ್ರೀದೇವಿ ಹೋಟಲ್ ಹತ್ತಿರ ಬರುವಂತೆ ತಿಳಿಸಿದ್ದರ ಮೇರೆಗೆ, ಲೋಕಾಯುಕ್ತ ಪೋಲಿಸರ

ರವರ ಪೂರ್ವಯೋಜಿತ ದಾಳಿಯಲ್ಲಿ ಲಂಚದ ಹಣವನ್ನು ಪಡೆಯುವಾಗ ಸಿಕ್ಕಿಬಿದ್ದಿರುತ್ತಾರೆ. ನಂತರ ತನಿಖಾಧಿಕಾರಿಗಳು ತನಿಖೆಯನ್ನು ಮಾಡಿ ಎ.ಡಿ.ಜಿ.ಪಿ ರವರ ಮುಖಾಂತರ ಸಕ್ಷಮ ಪ್ರಾಧಿಕಾರಕ್ಕೆ ಮನವಿ ಪತ್ರವನ್ನು ಸಲ್ಲಿಸಿಕೊಂಡು, ಅದರಂತೆ ಅಭಿಯೋಜನಾ ಮಂಜೂರಾತಿಯನ್ನು ಪಡೆದು ಆ.ಸ.ನೌ ರವರ ವಿರುದ್ಧ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

16. ಶಿಸ್ತು ಪ್ರಾಧಿಕಾರ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ನುಡಿಸಾಕ್ಷಿ ಮಾಡಿದ್ದು, ನಿ.ಪಿ.1 ರಿಂದ 3 ಗುರುತಿಸಿಕೊಳ್ಳಲಾಯಿತು. ಪಿ.ಡಬ್ಲ್ಯೂ.1 ರವರ ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ಆ.ಸ.ನೌ ರವರನ್ನು ಈ ಮೊದಲು ನೋಡಿರುವುದಿಲ್ಲ ಮತ್ತು ಏನು ಕೆಲಸ ಮಾಡುತ್ತಾರೆ ಎಂಬುದು ನನಗೆ ಗೊತ್ತಿಲ್ಲ, ಅದೇ ರೀತಿ ಚಾ.ಸ.2 ಮತ್ತು 3 ರವರು ಸಹ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ತಾನು ತುಮಕೂರು ಲೋಕಾಯುಕ್ತ ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ ಮತ್ತು ಆ.ಸ.ನೌಕರರ ವಿರುದ್ಧ ಯಾವುದೇ ದೂರನ್ನು ಸಲ್ಲಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಮುಂದುವರೆದು, ತಾನು ಆ.ಸ.ನೌ ರವರ ಬಳಿ ತನ್ನ ಕೆಲಸದ ಬಗ್ಗೆ ಎಂದೂ ಹೋಗಿಲ್ಲ, ಇವರು ತನ್ನ ಬಳಿ ಲಂಚ ಕೊಡುವಂತೆ ಕೇಳಿಲ್ಲ ಮತ್ತು ಆತನಿಗೆ ಹಣ ಕೊಟ್ಟಿಲ್ಲ. ನಿ.ಪಿ.1 ರಿಂದ ನಿ.ಪಿ.3 ರ ದಾಖಲೆಗಳಲ್ಲಿ ನನ್ನ ಸಹಿಗಳು ಇದ್ದು, ಆದರೆ ಅವುಗಳಲ್ಲಿ ಬರೆದು ವಿಷಯ ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಹೀಗೆ 4 ವರ್ಷದ ಹಿಂದೆ ತಮ್ಮ ಊರಿನ ರವಿ ಎಂಬಾತ ಬಗರ್ ಹುಕ್ಕುಂ ಜಮೀನು ಮಂಜೂರು ಮಾಡಿಸುವುದಾಗಿ ಹೇಳಿದ್ದರಿಂದ ಸಹಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಮಂಡನಾಧಿಕಾರಿಗಳು ಇಲ್ಲಿಯ ನಿ.ಪಿ.1 ರಿಂದ ನಿ.ಪಿ.3ರ ವಿರುದ್ಧ ಸಾಕ್ಷಿ ನುಡಿದಿದ್ದರಿಂದ ಇವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟಿ ಸವಾಲು ಮಾಡಿದಾಗ ತಮ್ಮ ಪಾಟಿ ಸವಾಲಿನಲ್ಲಿ ನಿ.ಪಿ.1 ರಿಂದ ನಿ.ಪಿ.3ರಲ್ಲಿ ಬರೆದ ವಿಷಯಗಳ ಬಗ್ಗೆ ಅಲ್ಲಗೆಳೆದಿರುತ್ತಾರೆ. ಅಲ್ಲದೇ ತಾನು ನಿ.ಪಿ.4 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಆ.ಸ.ನೌ ರವರು ನಿ.ಪಿ.4 ರಂತೆ ಲಿಖಿತ ಸಂಜಯಿಷಿ ಕೊಟ್ಟಿದ್ದರು ಎನ್ನುವುದು ತನಗೆ ಗೊತ್ತಿಲ್ಲವೆಂದು ಅಲ್ಲದೇ ತಾನು ತನಿಖಾಧಿಕಾರಿಗಳ ಮುಂದೆ ನಿ.ಪಿ.5 ಮತ್ತು ನಿ.ಪಿ.5(ಎ) ರಂತೆ ಹೇಳಿಕೆಯನ್ನು ನೀಡಿರುವುದಿಲ್ಲ ಅಂತಾ ನುಡಿದಿರುತ್ತಾರೆ. ನಿ.ಪಿ.1 ಇದು ದೂರಿನ ದೃಢೀಕೃತ ನಕಲು, ನಿ.ಪಿ.2 ಪ್ರಾಯೋಗಿಕ ಪಂಚಾನಾಮೆಯ ದೃಢೀಕೃತ ನಕಲು, ನಿ.ಪಿ.3 ಇದು ಟ್ರಾಪ್ ಪಂಚನಾಮೆಯ ದೃಢೀಕೃತ ನಕಲು

ಇರುತ್ತದೆ. ನಿ.ಪಿ.5 ಮತ್ತು ನಿ.ಪಿ.5(ಎ) ಇದು ದೂರುದಾರರ ಹೇಳಿಕೆ ಮತ್ತು ಮುಂದುವರೆದ ಹೇಳಿಕೆಯ ದೃಢೀಕೃತ ನಕಲು ಇರುತ್ತದೆ.

17. ಶಿಸ್ತು ಪ್ರಾಧಿಕಾರವು ಶ್ರೀ. ಆರ್ ಪ್ರಕಾಶ್ ತಂದೆ ರಂಗಪ್ಪ, ದ್ವಿತೀಯ ದರ್ಜೆ ಸಹಾಯಕರು, ಲೋಕೋಪಯೋಗಿ ಇಲಾಖೆ, ತಿಪಟೂರು ಇವರನ್ನು ಪಿ.ಡಬ್ಲ್ಯೂ.2 ಎಂದು ನುಡಿಸಾಕ್ಷಿ ಮಾಡಿಸಲಾಗಿದೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ: 19/09/2013 ರಂದು ತನ್ನ ಮೇಲಾಧಿಕಾರಿಗಳ ಆದೇಶದ ಮೇರೆಗೆ ಬೆಳಿಗ್ಗೆ 11.45 ರಿಂದ 12.00ರ ವೇಳೆಯಲ್ಲಿ ತಾನು ತುಮಕೂರು ಲೋಕಾಯುಕ್ತ ಠಾಣೆಗೆ ಹೋಗಿದ್ದು, ಅಲ್ಲಿ ಪಂಚ ಸಾಕ್ಷಿ ಶ್ರೀ. ನವೀನ್‌ಕುಮಾರ್ ಅವರ ಪರಿಚಯ ಮಾಡಿಕೊಟ್ಟಿರುತ್ತಾರೆ ಅಂತಾ ನುಡಿದಿರುತ್ತಾರೆ.

18. ಮುಂದುವರೆದು, ದೂರಿನ ಅಂಶಗಳ ಬಗ್ಗೆ ಮಾಹಿತಿ ನೀಡಿದ್ದು, ದೂರುದಾರರು ರೂ.500/– ಮುಖ ಬೆಲೆಯ 5 ನೋಟುಗಳು ಮತ್ತು ರೂ.100/– ಮುಖ ಬೆಲೆಯ 3 ನೋಟುಗಳನ್ನು ಒಟ್ಟು ರೂ.2,800/– ಗಳನ್ನು ಹಾಜರು ಪಡಿಸಿದ್ದು, ಸದರಿ ನೋಟುಗಳ ನಂಬರ್ ಹಾಗೂ ಮೌಲ್ಯವನ್ನು ಒಂದು ಬಿಳಿ ಹಾಳೆಯಲ್ಲಿ ಬರೆದುಕೊಳ್ಳಲಾಯಿತು. ಸದರಿ ನೋಟುಗಳಿಗೆ ಸಿಬ್ಬಂದಿ ಅವರಿಂದ ಪೌಡರ್ ಲೇಪಿಸಿ ಸಾಕ್ಷಿ ಶ್ರೀ. ದಯಾಬಂಧು ಅವರ ಕೈಯಿಂದ ದೂರುದಾರರ ಶರ್ಟ್‌ನ ಜೇಬಿನಲ್ಲಿ ಇಡಿಸಲಾಯಿತು. ಶ್ರೀ. ದಯಾಬಂಧು ಅವರ ಕೈಗಳನ್ನು ದ್ರಾವಣದಲ್ಲಿ ತೊಳೆಸಿದಾಗ ದ್ರಾವಣ ನೀಲಿ ಬಣ್ಣಕ್ಕೆ ಬದಲಾವಣೆಯಾಯಿತು ಎಂದು ನುಡಿದಿರುತ್ತಾರೆ.

19. ದೂರುದಾರರಿಗೆ ಲಂಚ ಕೇಳಿದ ಅಧಿಕಾರಿಗೆ ಹಣ ಕೊಟ್ಟ ನಂತರ ಕೈ ಎತ್ತಿ ಸೂಚನೆ ಕೊಡುವಂತೆ ತನಿಖಾಧಿಕಾರಿಗಳು ತಿಳಿಸಿರುತ್ತಾರೆ ಹಾಗೂ ನಿ.ಪಿ.2 ರಂತೆ ಪ್ರಾಯೋಗಿಕ ಪಂಚನಾಮವನ್ನು ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ.

20. ನಂತರ ಲೋಕಾಯುಕ್ತ ಪೋಲಿಸ್ ಠಾಣೆ ಇಲಾಖಾ ಜೀಪಿನಲ್ಲಿ ಹುಳಿಯಾರ ನಾಡ ಕಛೇರಿಯ ಹತ್ತಿರ ಸಂಜೆ 4.30 ಗಂಟೆಗೆ ತಲುಪಿದ್ದು, ತನಗೆ ಹಾಗೂ ದೂರುದಾರರಿಗೆ ಲಂಚ ಕೇಳಿದ ಅಧಿಕಾರಿಯನ್ನು ಭೇಟಿ ಮಾಡಲು ಕಳುಹಿಸಿದ್ದರು. ಆ.ಸ.ನೌ ರವರನ್ನು ಭೇಟಿ ಮಾಡಲು ಹೋದಾಗ ಆ.ಸ.ನೌ ರವರು ಕಛೇರಿಯಲ್ಲಿ ಲಭ್ಯ ಇರಲಿಲ್ಲ, ಚಿಕ್ಕನಾಯಕನಹಳ್ಳಿಗೆ ಹೋದ ಬಗ್ಗೆ

ಕಛೇರಿ ಸಿಬ್ಬಂದಿ ತಿಳಿಸಿದ ಕಾರಣ, ವಾಪಸ್ಸು ಬಂದು ತನಿಖಾಧಿಕಾರಿಗಳಿಗೆ ತಿಳಿಸಿದ್ದೆವು ಅಂತಾ ನುಡಿದಿರುತ್ತಾರೆ.

21. ಮುಂದುವರೆದು, ಚಿಕ್ಕನಾಯಕನಹಳ್ಳಿ ನೆಹರು ವೃತ್ತದ ಬಳಿಗೆ ಹೋಗಿ ದೂರುದಾರರು ಆ.ಸ.ನೌರವರಿಗೆ ಫೋನ್ ಮಾಡಿದಾಗ ಶ್ರೀದೇವಿ ಹೋಟೆಲ್‌ಗೆ ಬಂದು ಕಾಣುವಂತೆ ಹೇಳಿದ್ದರಿಂದ, ಇವರೆಲ್ಲರೂ ಶ್ರೀದೇವಿ ಹೋಟೆಲ್ ಹತ್ತಿರ ಹೋದಾಗ ಆ.ಸ.ನೌ ರವರು ಹೋಟೆಲ್ ಹೊರಗೆ ಇದ್ದರು ಅಂತಾ ನುಡಿದಿರುತ್ತಾರೆ. ಮುಂದುವರೆದು, ದೂರುದಾರರು ಮತ್ತು ಅವರ ಸ್ನೇಹಿತ ಆ.ಸ.ನೌರವರ ಜೊತೆಗೆ ಹೋಟೆಲ್ ಒಳಗೆ ಹೋಗಿ ಒಂದು ಟೇಬಲ್‌ನಲ್ಲಿ ಕುಳಿತುಕೊಂಡಿದ್ದರು, ಹೋಟೆಲ್ ಒಳಗೆ ಆ.ಸ.ನೌರವರು ದೂರುದಾರರ ಬಳಿ ಹಣ ಕೇಳಿ ಪಡೆದದ್ದನ್ನು ತಾನು ನೋಡಿಲ್ಲ ಎಂದು ನುಡಿದಿರುತ್ತಾರೆ. ಇವರು ಟೀ ಕುಡಿದು ಹೊರಗೆ ಬರುವಾಗ ದೂರುದಾರರು ಸೂಚನೆ ಕೊಟ್ಟ ಮೇರೆಗೆ ತನಿಖಾಧಿಕಾರಿ ಮತ್ತು ಸಿಬ್ಬಂದಿ ಆ.ಸ.ನೌ. ರವರನ್ನು ವಶಕ್ಕೆ ಪಡೆದು ತಾಲ್ಲೂಕು ಕಛೇರಿಗೆ ಕರೆದುಕೊಂಡು ಹೋದರು ಅಂತಾ ನುಡಿದಿರುತ್ತಾರೆ.

22. ನಂತರ ಆ.ಸ.ನೌರವರ ಕೈಗಳನ್ನು ಸೋಡಿಯಂ ದ್ರಾವಣದಲ್ಲಿ ತೊಳೆಸಿದಾಗ ದ್ರಾವಣ ನೀಲಿ ಬಣ್ಣಕ್ಕೆ ಬದಲಾವಣೆಯಾಗಿದ್ದು, ತನಿಖಾಧಿಕಾರಿಗಳು ದ್ರಾವಣವನ್ನು ಬಾಟಲ್‌ನಲ್ಲಿ ಶೇಖರಿಸಿ ಸೀಲ್ ಮಾಡಿ ವಶಕ್ಕೆ ಪಡೆದುಕೊಂಡಿದ್ದು, ಆ.ಸ.ನೌರವರನ್ನು ಹಣದ ಬಗ್ಗೆ ವಿಚಾರಿಸಿದಾಗ ತನ್ನ ಶರ್ಟ್ ಜೇಬಿನಲ್ಲಿ ಇರುವುದಾಗಿ ಹೇಳಿದ ನಂತರ ತನಿಖಾಧಿಕಾರಿ ಆ.ಸ.ನೌ ರವರ ಶರ್ಟ್ ಜೇಬಿನಲ್ಲಿದ್ದ ರೂ.2,800/-ಗಳ ಹಣವನ್ನು ವಶಕ್ಕೆ ಪಡೆದು ಪರಿಶೀಲಿಸಿದಾಗ, ಈಗಾಗಲೇ ಬರೆದುಕೊಂಡಿದ್ದು ಮೌಲ್ಯ ಮತ್ತು ನಂಬರ್‌ಗಳೊಂದಿಗೆ ತಾಳೆ ಮಾಡಿ ನೋಡಲಾಗಿ ಹೊಂದಾಣಿಕೆ ಆಗಿರುತ್ತದೆ ಎಂದು ನುಡಿದಿರುತ್ತಾರೆ.

23. ಮುಂದುವರೆದು, ಆ.ಸ.ನೌ ರವರಿಗೆ ಬೇರೆ ಶರ್ಟ್‌ನ ವ್ಯವಸ್ಥೆ ಮಾಡಿ, ಆ ಶರ್ಟ್‌ನ್ನು ವಶಕ್ಕೆ ಪಡೆದು ಜೇಬಿನ ಭಾಗವನ್ನು ಸೋಡಿಯಂ ದ್ರಾವಣದಲ್ಲಿ ತೊಳೆಸಿದಾಗ ದ್ರಾವಣ ನೀಲಿ ಬಣ್ಣಕ್ಕೆ

ಬದಲಾವಣೆಯಾಗಿರುತ್ತದೆ ಎಂದು ನುಡಿದಿರುತ್ತಾರೆ. ತನಿಖಾಧಿಕಾರಿಗಳು ನಿ.ಪಿ.3 ರಂತೆ ಪಂಚನಾಮೆ ಮಾಡಿ ಇವರ ಸಹಿ ಪಡೆದಿರುತ್ತಾರೆ ಮತ್ತು ಪ್ರಾಯೋಗಿಕ ಪಂಚನಾಮೆ ಮತ್ತು ಟ್ರಾಪ್ ಪಂಚನಾಮೆ ಮಾಡುವಾಗ ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ ಅಂತಾ ನುಡಿದಿರುತ್ತಾರೆ. ನಂತರ ಆ.ಸ.ನೌ ರವರನ್ನು ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ ಅಂತಾ ನುಡಿದಿರುತ್ತಾರೆ.

24.ಮಂಡನಾಧಿಕಾರಿಗಳು ಈ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟಿ ಸವಾಲು ಮಾಡಿದಾಗ, ತಮ್ಮ ಪಾಟಿ ಸವಾಲಿನಲ್ಲೂ ಆ.ಸ.ನೌ ರವರು ದೂರುದಾರರು ರೂ.2,800/-ಗಳ ಲಂಚದ ಹಣವನ್ನು ಕೇಳಿ ಪಡೆದು ಎಣಿಸಿ ತನ್ನ ಶರ್ಟ್ ಜೇಬಿನಲ್ಲಿ ಇಟ್ಟುಕೊಂಡಿದ್ದನ್ನು ತಾನು ನೋಡಿರುತ್ತೇನೆ ಅಂತಾ ಮಾಡಿದ ಸಲಹೆಗೆ ತಾನು ನೋಡಿರುವುದಿಲ್ಲ ಅಂತಾ ನುಡಿದಿರುತ್ತಾರೆ. ತನಿಖಾಧಿಕಾರಿಗಳು ಆ.ಸ.ನೌ ರವರಿಂದ ವಶ ಪಡಿಸಿಕೊಂಡ ಹಣದಲ್ಲಿ ರೂ.2,700/- ಇತ್ತು ಹಾಗೂ ರೂ.100/- ಮುಖ ಬೆಲೆಯ ಪೌಡರ್ ಲೇಪಿತ ನೋಟನ್ನು ಹೋಟೆಲ್ ಬಿಲ್ ಸಲುವಾಗಿ ಕೊಟ್ಟಿದ್ದರು ಎಂದು ಮಾಡಿದ ಸಲಹೆಗೆ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಈ ಬಗ್ಗೆ ಇವರು ನಿ.ಪಿ.6ರಂತೆ ಹೇಳಿಕೆಯನ್ನು ಕೊಟ್ಟಿರುತ್ತಾರೆ ಎನ್ನುವುದನ್ನು ಅಲ್ಲಗಳೆದಿರುತ್ತಾರೆ.

25.ಶಿಸ್ತು ಪ್ರಾಧಿಕಾರವು ಸಿ.ಡಬ್ಲ್ಯೂ.4 ತನಿಖಾಧಿಕಾರಿಯವರನ್ನು ಪಿ.ಡಬ್ಲ್ಯೂ.3 ಎಂದು ನುಡಿಸಾಕ್ಷಿ ಮಾಡಿಸಿರುತ್ತಾರೆ. ತಮ್ಮ ಮುಖ್ಯ ವಿಚಾರಣೆಯಲ್ಲಿ ದೂರುದಾರರು ಅವರ ಸ್ನೇಹಿತ ರವೀಂದ್ರ ರವರ ಜೊತೆಗೆ ಠಾಣೆಗೆ ಬಂದು ದೂರನ್ನು ನೀಡಿದ್ದು, ಅದನ್ನು ತಮ್ಮ ಠಾಣೆ ಮೊಕದ್ದಮೆ ಸಂಖ್ಯೆ: 12/2013ರ ಅಡಿಯಲ್ಲಿ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಸಂಬಂಧಪಟ್ಟ ನ್ಯಾಯಾಲಯಕ್ಕೆ ಕಳುಹಿಸಿ ಕೊಟಿದ್ದು, ದೂರುದಾರರು ತನ್ನ ನಡುವೆ ಆದ ಸಂಭಾಷಣೆಯನ್ನು ದೂರುದಾರರ ಸ್ನೇಹಿತರ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಸಿಕೊಂಡಿರುತ್ತಾರೆ ಅಂತಾ ತಿಳಸಿದ್ದ ಮೇರೆಗೆ ಪಂಚರನ್ನು ಕರಿಸಿಕೊಂಡು ಅವರಿಗೆ ದೂರಿನ ಸಾರಾಂಶವನ್ನು ತಿಳಿಸಿ, ಮೊಬೈಲ್‌ನಲ್ಲಿದ್ದ ಸಂಭಾಷನೆಯನ್ನು ಕಾರ್ಡ್ ರೀಡರ್ ಮೂಲಕ ಲ್ಯಾಪ್‌ಟಾಪ್‌ಗೆ ಹಾಕಿ ಕೇಳಲಾಗಿ

ದೂರುದಾರರು ದೂರಿರುವಂತೆ ಲಂಚಕ್ಕೆ ಒತ್ತಾಯಪಡಿಸಿದ ಅಂಶ ಕೇಳಿ ತಿಳಿದು, ಸದರಿ ದೂರಿನ ಸಂಭಾಷಣೆಯನ್ನು ಒಂದು ಸಿ.ಡಿಗೆ ವರ್ಗಾಯಿಸಿ, ನಿ.ಪಿ.2 ಪ್ರಕಾರ ಪ್ರಾಯೋಗಿಕ ಪಂಚನಾಮೆಯನ್ನು ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ.

26.ನಂತರ ದೂರುದಾರರು ತಂದಿದ್ದ ಲಂಚದ ರೂ.2,800/- ಹಣವನ್ನು ಹಾಜರುಪಡಿಸಿದ್ದು, ಅವುಗಳನ್ನು ಪಂಚಸಾಕ್ಷಿ ಶ್ರೀ. ಪ್ರಕಾಶ್ ಹೇಳಿದಂತೆ ಇನ್ನೊಬ್ಬ ಪಂಚಸಾಕ್ಷಿ ಶ್ರೀ. ದಯಾಬಂಧು ರವರು ಒಂದು ಬಿಳಿ ಹಾಳೆಯ ಮೇಲೆ ನೋಟಿನ ಸಂಖ್ಯೆಗಳನ್ನು ಬರೆದುಕೊಂಡಿದ್ದು, ಸದರಿ ಪಟ್ಟಿಯನ್ನು ನಿ.ಪಿ.8 ಎಂದು ಗುರುತಿಸಿಕೊಂಡಿರುತ್ತಾರೆ. ನಂತರ ತಮ್ಮ ಸಿಬ್ಬಂದಿಯ ಮುಖಾಂತರ ನೋಟಿನ ಮೇಲೆ ಫಿನಾಫ್ತಲಿನ್ ಪೌಡರ್‌ನ್ನು ಲೇಪಿಸಿ, ಅದನ್ನು ಪಂಚಸಾಕ್ಷಿ ಶ್ರೀ. ಪ್ರಕಾಶ್ ರವರು ಅವುಗಳನ್ನು ಎಣಿಸಿ ದೂರುದಾರರ ಶರ್ಟ್‌ನ ಎಡಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ, ನಂತರ ಶ್ರೀ. ಪ್ರಕಾಶ್ ರವರ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೊಳೆದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಅಂತಾ ನುಡಿದಿರುತ್ತಾರೆ. ನಂತರ ದೂರುದಾರರೊಂದಿಗೆ ಪ್ರಕಾಶ್‌ರವರನ್ನು ನೆರಳು ಸಾಕ್ಷಿಯಾಗಿ ಇರಲು ಕಛೇರಿಯಲ್ಲಿ ನಡೆಯುವ ವಿದ್ಯಾಮಾನಗಳನ್ನು ಗಮನಿಸಬೇಕೆಂದು ಸೂಚಿಸಿರುತ್ತಾರೆ. ನಂತರ ಮಧ್ಯಾಹ್ನ 2.30ಕ್ಕೆ ತಾನು ಹಾಗೂ ತನ್ನ ಸಿಬ್ಬಂದಿಯೊಂದಿಗೆ ಮತ್ತು ಪಂಚರೊಂದಿಗೆ ಹಾಗೂ ದೂರುದಾರರೊಂದಿಗೆ ಆ.ಸ.ನೌ ರವರ ಕಛೇರಿಗೆ ಹೋಗಿ ದೂರುದಾರರನ್ನು ಮತ್ತು ನೆರಳು ಸಾಕ್ಷಿಯನ್ನು ಆ.ಸ.ನೌ ರವರ ಕಛೇರಿ ಒಳಗೆ ಹೋಗಲು ತಿಳಿಸಿದ್ದು, ಅವರು ಕಛೇರಿಗೆ ಹೋಗಿ ಮರಳಿ ಬಂದು ಆ.ಸ.ನೌ ರವರ ಕಛೇರಿಯಲ್ಲಿ ಇರುವುದಿಲ್ಲ ಎಲ್ಲೋ ಹೋಗಿರುತ್ತೇರೆ ಎಂದು ತಿಳಿಸಿದ್ದು, ನಂತರ ದೂರುದಾರರು ಆ.ಸ.ನೌ ರವರಿಗೆ ಫೋನು ಮಾಡಿ ವಿಚಾರಿಸಿದಾಗ ತಾನು ಚಿಕ್ಕನಾಯಕನಹಳ್ಳಿಗೆ ಹೋಗುತ್ತಿದ್ದು, ಚಿಕ್ಕನಾಯಕನ ಹಳ್ಳಿಯ ನೆಹರು ಸರ್ಕಲ್‌ಗೆ ಬರಬೇಕೆಂದು ತಿಳಸಿದ್ದ, ಅದನ್ನು ವಾಯ್ಸ್ ರೆಕಾರ್ಡ್‌ಸಿಂದ ರೆಕಾರ್ಡ್ ಮಾಡಿಕೊಂಡೆವು ಅಂತಾ ನುಡಿಟಿರುತ್ತಾರೆ.

27.ನಂತರ ಚಿಕ್ಕನಾಯಕನಹಳ್ಳಿ ನೆಹರು ಸರ್ಕಲ್‌ಗೆ ಹೋದಾಗ, ಆ.ಸ.ನೌ ರವರು ದೂರುದಾರರಿಗೆ ಫೋನು ಮಾಡಿ ಶ್ರೀದೇವಿ ಹೋಟೆಲ್‌ಗೆ ಬರಲು ತಿಳಿಸಿದ್ದು ಮೇರೆಗೆ ದೂರುದಾರರು ಮತ್ತು ಅವರ ಸ್ನೇಹಿತ ರವೀಂದ್ರ, ನೆರಳು ಸಾಕ್ಷಿ ಶ್ರೀ. ಪ್ರಕಾಶ್ ರೊಂದಿಗೆ ಹೋಟೆಲ್ ಒಳಗೆ ಹೋಗಿದ್ದು, ನಂತರ ದೂರುದಾರರನ್ನು ಹೋಟೆಲ್‌ನಿಂದ ಹೊರಗೆ ಬಂದು ತನ್ನ ಕರ್ಚಿಫನ್ನು ತೆಗೆದು ಮುಖವರೆಸಿಕೊಳ್ಳುವ ಮೂಲಕ ಸೂಚನೆಯನ್ನು ನೀಡಿದ್ದು, ಆಗ ತಾನು ಹಾಗೂ ಟ್ರಾಪ್ ತಂಡ ಹೋಟೆಲ್ ಒಳಕ್ಕೆ ಹೋಗಿ ದೂರುದಾರರನ್ನು ತೋರಿಸಿದ ವ್ಯಕ್ತಿಯನ್ನು ತಮ್ಮ ಗುರುತಿನ ಪತ್ರದ ಮೂಲಕ ಪರಿಚಯಿಸಿಕೊಂಡು ಸದರಿ ಸ್ಥಳವು ಜನಸಂದಣಿಯಿಂದ ಕೂಡಿದ್ದು, ಮುಂದಿನ ಪ್ರಕ್ರಿಯೆಗಳನ್ನು ನಡೆಸುವ ಸಲುವಾಗಿ ಚಿಕ್ಕನಾಯಕನ ಹಳ್ಳಿಯ ತಾಲ್ಲೂಕು ಕಛೇರಿಗೆ ಆ.ಸ.ನೌ ರವರನ್ನು ಕರೆದುಕೊಂಡು ಬಂದು ಕಚೇರಿಯಲ್ಲಿದ್ದ ಶಿರಸ್ತೇದಾರರು ಅನುವು ಮಾಡಿಕೊಟ್ಟಂತೆ ತಹಶೀಲ್ದಾರ್‌ರವರ ನ್ಯಾಯಾಲಯದ ಹಾಲ್‌ನಲ್ಲಿ ಉಳಿದ ಪ್ರಕ್ರಿಯೆಗಳನ್ನು ಮಾಡಲಾಯಿತು. ಸಿಬ್ಬಂದಿಯ ಸಹಾಯದಿಂದ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ ಆ.ಸ.ನೌರವರ ಕೈಗಳನ್ನು ಅದ್ದಿಸಿ ತೊಳೆದಾಗ, ನೀರಿನ ಬಣ್ಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಎಂದು ನುಡಿದಿರುತ್ತಾರೆ.

28.ಆ.ಸ.ನೌರವರನ್ನು ಲಂಚದ ಹಣದ ಬಗ್ಗೆ ಕೇಳಿದಾಗ ತಮ್ಮ ಶರ್ಟ್‌ನ ಜೇಬಿನಲ್ಲಿ ಇರುವುದನ್ನು ತಿಳಿಸಿದ್ದು, ಶ್ರೀ. ಪ್ರಕಾಶ್ ರವರು ಅದನ್ನು ತೆಗೆದು ಮತ್ತೊಬ್ಬ ಸಾಕ್ಷಿ ಶ್ರೀ. ದಯಾಬಂಧುರವರೊಂದಿಗೆ ಪರಿಶೀಲಿಸಿದಾಗ ರೂ.2,700/- ಗಳ ಹಣ ಇದ್ದು, ಒಂದು ನೋಟು ಇಲ್ಲದಿರುವುದು ಗಮನಕ್ಕೆ ಬಂದಿದ್ದು, ಅದರ ಬಗ್ಗೆ ಆ.ಸ.ನೌರವರನ್ನು ಕೇಳಿದಾಗ ಅವರು ಆ ಹೋಟೆಲ್‌ನಲ್ಲಿ 15/- ರೂ.ಗಳ ಬಿಲ್‌ನ್ನು ಪಾವತಿಸಿ ಉಳಿದ 85/- ರೂ.ಗಳನ್ನು ದೂರುದಾರರ ಪೆಟ್ರೋಲ್‌ಗೆ ಮರಳಿ ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೆರಳು ಸಾಕ್ಷಿ ಶ್ರೀ. ಪ್ರಕಾಶ್ ರವರು ಸಹಾ ಸಮರ್ಥಿಸಿದರು ಎಂದು ನುಡಿದಿರುತ್ತಾರೆ.

29.ನಂತರ ಆ.ಸ.ನೌರವರಿಗೆ ಬೇರೆ ಶರ್ಟ್‌ನ ವ್ಯವಸ್ಥೆ ಮಾಡಿ ಅವರು ಧರಿಸಿದ್ದ ಶರ್ಟ್‌ನ ಎಡ ಜೇಬನ್ನು ದ್ರಾವಣದಲ್ಲಿ ತೊಳೆಸಿದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಶರ್ಟ್‌ನ್ನು ವಶ ಪಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಅಲ್ಲದೇ, ನಿ.ಪಿ.4ರ ಪ್ರಕಾರ ಆ.ಸ.ನೌ ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ನಂತರ ದೂರುದಾರರಿಗೆ ನೀಡಿದ ಡಿಜಿಟಲ್ ವಾಯ್ಸ್ ರೆಕಾರ್ಡ್‌ರನ್ನು ಪಡೆದು ಅದರಲ್ಲಿದ್ದ ಎರಡು ಸಂಭಾಷಣೆಯನ್ನು ಲಿಪಿಕರಿಸಲಾಯಿತು. ಸದರಿ ಡಾಟಾವನ್ನು ಸಿಡಿ-2 ಎಂದು ಗುರುತಿಸಿ ವರ್ಗಾವಣೆ ಮಾಡಿ, ಈ ಬಗ್ಗೆ ನಿ.ಪಿ.3 ರಂತೆ ಟ್ರಾಪ್ ಪಂಚನಾಮೆಯನ್ನು ಮಾಡಲಾಯಿತು ಎಂದು ನುಡಿದಿರುತ್ತಾರೆ.

30.ನಂತರ ಶ್ರೀದೇವಿ ಹೋಟೆಲ್ ದೂರುದಾರರು ಮತ್ತು ಪಂಚರೊಂದಿಗೆ ಸದರಿ ಹೋಟೆಲ್‌ನ ಮಾಲೀಕರು ಶ್ರೀ. ಚಂದ್ರಶೇಖರ ರವನ್ನು ಪರಿಚಯಿಸಿಕೊಂಡು, ಅವರಿಗೆ ವಿಷಯವನ್ನು ತಿಳಿಸಿ ಅವರ ಕ್ಯಾಷ್ ಬಾಕ್ಸ್ ಅವರಿಂದಲೇ ಪರಿಶೀಲಿಸಲಾಗಿ, ಅಲ್ಲಿ ಒಟ್ಟು ನೂರರ ಮುಖಬೆಲೆಯ 9 ನೋಟುಗಳಿದ್ದು ಆ ಪೈಕಿ ಒಂದು ನೋಟಿನ ಮುಖಬೆಲೆ ಸಂಖ್ಯೆ ಈಗಾಗಲೇ ಪಂಚರು ಪ್ರತ್ಯೇಕ ಬಿಳಿ ಹಾಳೆಯ ಮೇಲೆ ದಾಖಲಿಸಿಕೊಂಡಿದ್ದ ಸಂಖ್ಯೆ: 9 ಎನ್‌ಪಿ 944852 ಆಗಿತ್ತು. ಸದರಿ ನೋಟನ್ನು ಪ್ರತ್ಯೇಕ ಕವರ್‌ನಲ್ಲಿ ಹಾಕಿ ಸೀಲ್ ಮಾಡಿ ಅಮಾನತ್ತುಪಡಿಸಿಕೊಂಡು, ಶ್ರೀ. ಚಂದ್ರಶೇಖರ್ ಎರಡು ಕೈಗಳ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಸಿದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು, ಸದರಿ ದ್ರಾವಣವನ್ನು ಒಂದು ಪ್ಲಾಸ್ಟಿಕ್ ಸೀಶೆಯಲ್ಲಿ ಶೇಖರಿಸಿ ಸೀಲ್ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ತಹಶೀಲ್ದಾರ್ ರವರ ನ್ಯಾಯಾಲಯದ ಹಾಲ್‌ಗೆ ಮರಳಿ ಬಂದು ಟ್ರಾಪ್ ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ.

31. ಮುಂದುವರೆದು, ದಿನಾಂಕ: 20/09/2013 ರಂದು ತನಿಖೆಗೆ ಹಾಜರಾಗುವಂತೆ ತಹಶೀಲ್ದಾರ್ ರವರನ್ನು ನೋಟಿಸ್ ಕಳುಹಿಸಿದ್ದು, ಅವರು ಹಾಜರಾಗಿ ಸಿ.ಡಿಗಳಲ್ಲಿ ರೆಕಾರ್ಡ್ ಆಗಿದ್ದ ಸಂಭಾಷಣೆಯನ್ನು ಕೇಳಿಸಲಾಗಿ ಒಬ್ಬರ ಧ್ವನಿ ಆ.ಸ.ನೌರವರದ್ದೆಂದು ದೃಢೀಕರಿಸಿದ್ದು, ಸದರಿ

ಸಂಭಾಷಣೆಗಳನ್ನು ಲಿಪಿಕೃತಗೊಳಿಸಿ ನಿ.ಪಿ.9 ರಿಂದ ನಿ.ಪಿ.11 ಎಂದು ಗುರುತಿಸಿಕೊಂಡಿರುತ್ತಾರೆ ಎಂದು ನುಡಿರುತ್ತಾರೆ. ಮುಂದುವರೆದು, ತಹಶೀಲ್ದಾರ್ ರವರಿಂದ ಆ.ಸ.ನೌರವರ ಸೇವಾ ವಿವರವನ್ನು ನಿ.ಪಿ.12 ರಂತೆ ಪಡೆದುಕೊಂಡಿದ್ದು, ಕುಟುಂಬ ವ್ಯವಸಾಯ ದೃಢೀಕರಣ ಪತ್ರವನ್ನು ಪಡೆಯುವ ಸಂಬಂಧ ಅನುಸರಿಸಬೇಕಾದ ನಿಯಮಾವಳಿಗಳ ಬಗ್ಗೆ ಮಾಹಿತಿಯನ್ನು ತಹಶೀಲ್ದಾರ್ ಇವರಿಂದ ನಿ.ಪಿ.13 ರಂತೆ ಪಡೆದುಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಶ್ರೀದೇವಿ ಹೋಟೆಲ್ ಕಟ್ಟಡ ಮಳಿಗೆಯ ಖಾತಾ ಉತಾರೆಯನ್ನು ನಿ.ಪಿ.14 ರಂತೆ, ನಂತರ ದೂರುದಾರರಿಗೆ ನೋಟಿಸ್ ನೀಡಿ ಜಮೀನಿನ ಆರ್.ಟಿ.ಸಿ ನ್ನು ನಿ.ಪಿ.15 ಮತ್ತು ನಿ.ಪಿ.16 ರಂತೆ, ದಿನಾಂಕ: 13/03/2014 ರಂದು ಲೋಕಾಯುಕ್ತ ಕಛೇರಿ ಬೆಂಗಳೂರು ನೋಡಲ್ ಅಧಿಕಾರಿ ರವರಿಂದ ದೂರುದಾರ ಮತ್ತು ಆ.ಸ.ನೌ ರವರ ಮೊಬೈಲ್ ನಂಬರ್‌ನ ಸಿ.ಡಿ.ಆರ್ ಇ–ಮೇಲ್ ಮುಖಾಂತರ ಸ್ವೀಕರಿಸಿಕೊಂಡು, ಪರಿಶೀಲಿಸಲಾಗಿ ಮಹಜರ್‌ನಲ್ಲಿ ಈಗಾಗಲೇ ನಮೂದಿಸಿರುವಂತೆ ಕರೆ ಮಾಡಿದ ನಂಬರ್‌ಗಳು ದಿನಾಂಕ ಮತ್ತು ಸಮಯ ತಾಳೆಯಾಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ದಾಖಲಾತಿಗಳನ್ನು ನಿ.ಪಿ.17 ರಿಂದ ನಿ.ಪಿ.22 ಎಂದು ಗುರುತಿಸಿಕೊಳ್ಳಲಾಗಿದೆ. ನಂತರ ರಾಸಾಯನಿಕ ತಜ್ಞರಿಗೆ ಮುದ್ದೆ ಮಾಲುಗಳನ್ನು ಪರಿಶೀಲಿಸಿ ವರದಿ ನೀಡಲು ಕೇಳಿಕೊಂಡಿದ್ದು, ಅದರಂತೆ ವರದಿಯನ್ನು ಪಡೆದುಕೊಂಡಿದ್ದು ಅವುಗಳನ್ನು ನಿ.ಪಿ.24 ಮತ್ತು ನಿ.ಪಿ.25 ಎಂದು ಗುರುತಿಸಿಕೊಳ್ಳಲಾಗಿದೆ. ನಂತರ ಲೋಕೋಪಯೋಗಿ ಇಲಾಖೆಯವರು ಸ್ಥಳದ ನಕ್ಷೆಯನ್ನು ತಯಾರಿಸಿ ಕೊಡಲು ಹೇಳಿದ್ದು, ಆ ಪ್ರಕಾರ ಪತ್ರವನ್ನು ಬರೆದು ಪತ್ರ ಮತ್ತು ನಕಾಶೆಗಳನ್ನು ನಿ.ಪಿ.26 ರಿಂದ ನಿ.ಪಿ.28 ಎಂದು ಗುರುತಿಸಿಕೊಳ್ಳಲಾಗಿದೆ. ಪ್ರಾಯೋಗಿಕ ಪಂಚನಾಮೆ ಮತ್ತು ಟ್ರಾಪ್ ಪಂಚನಾಮೆ ಬಗ್ಗೆ ಛಾಯಾಚಿತ್ರಗಳನ್ನು ತೆಗೆದಿದ್ದು, ಅವುಗಳನ್ನು ನಿ.ಪಿ.29 ಎಂದು ಗುರುತಿಸಿಕೊಳ್ಳಲಾಗಿದೆ.

32. ಆ.ಸ.ನೌ ರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ಮಾಡಿಸಿದ್ದು, ಅವರು ತಮ್ಮ ಸಾಕ್ಷಿಯಲ್ಲಿ ಎಲ್ಲಾ ವಿಷಯವನ್ನು ಅಲ್ಲಗೆಳದಿರುತ್ತಾರೆ. ತುಮಕೂರು ಸೆಷನ್ಸ್ ನ್ಯಾಯಾಲಯದಲ್ಲಿ ದಾಖಲಾದ ಸ್ಪೆಷಲ್ ಕೇಸ್ ನಂ.526/2014ರಲ್ಲಿ ಆದ ಆದೇಶದ ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು

ನಿ.ಡಿ.1 ಎಂದು ಗುರುತಿಸಲಾಗಿದ್ದು, ಸದರಿ ಆದೇಶದ ಪ್ರಕಾರ ತನಗೆ ಬಿಡುಗಡೆಯಾಗಿರುತ್ತದೆ ಎಂದು ನುಡಿದಿರುತ್ತಾರೆ.

33. ಈಗಾಗಲೇ ಹೇಳಿದ ಹಾಗೆ ದೂರುದಾರರು ತನಗೆ ಆ.ಸ.ನೌ ರವರು ಪರಿಚಯ ಇಲ್ಲವೆಂದು, ತಾನು ಆ.ಸ.ನೌ ರವರ ವಿರುದ್ಧ ದೂರನ್ನು ನೀಡಿರುವುದಿಲ್ಲವೆಂದು, ಆ.ಸ.ನೌ ರವರು ಯಾವುದೇ ಲಂಚದ ಬೇಡಿಕೆಯನ್ನು ಇಟ್ಟಿಲ್ಲವೆಂದು ಮತ್ತು ತಾನು ಹಣವನ್ನು ಕೊಟ್ಟಿಲ್ಲವೆಂದು ನುಡಿದಿರುತ್ತಾರೆ. ಅದರಂತೆ, ನಿ.ಪಿ.1 ರಿಂದ ನಿ.ಪಿ.3 ರಲ್ಲಿ ಬರೆದ ವಿಷಯಗಳು ತನಗೆ ಗೊತ್ತಿಲ್ಲವೆಂದು ನುಡಿದಿರುತ್ತಾರೆ. ಇವರನ್ನು ಮಂಡನಾಧಿಕಾರಿಗಳು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿದ್ದು, ಇವರ ಪಾಟಿಸವಾಲಿನಲ್ಲಿ ನಿ.ಪಿ.1 ರಿಂದ ನಿ.ಪಿ.3 ರಲ್ಲಿ ಬರೆದ ಎಲ್ಲಾ ವಿಷಯಗಳನ್ನು ಅಲ್ಲಗಳೆದಿರುತ್ತಾರೆ. ನರೆಳು ಸಾಕ್ಷಿಯಾದ ಶ್ರೀ. ಪ್ರಕಾಶ್ (ಪಿ.ಡಬ್ಲ್ಯೂ.2) ತಮ್ಮ ಮುಖ್ಯ ವಿಚಾರಣೆಯಲ್ಲಿ ತುಮಕೂರು ಲೋಕಾಯುಕ್ತ ಠಾಣೆಗೆ ಹೋಗಿರುವ ಬಗ್ಗೆ, ಅಲ್ಲಿ ದೂರುದಾರ ಮತ್ತು ಇನ್ನೊಬ್ಬ ಪಂಚನಾದ ಶ್ರೀ. ದಯಾಬಂಧು ರವರನ್ನು ಪರಿಚಯಿಸಿದ ಬಗ್ಗೆ ಹಾಗೂ ದೂರಿನ ಅಂಶಗಳ ಬಗ್ಗೆ ತಿಳಿದುಕೊಂಡಿರುವ ಬಗ್ಗೆ ಒಪ್ಪಿಕೊಂಡಿರುತ್ತಾರೆ. ಅಲ್ಲದೇ, ದೂರುದಾರರು ರೂ.2,800/- ಗಳನ್ನು ತನ್ನ ಸಮಕ್ಷಮ ಪೋಲಿಸ್ ಠಾಣೆಯಲ್ಲಿ ಹಾಜರುಪಡಿಸುವ ಬಗ್ಗೆ ಒಪ್ಪಿಕೊಂಡಿರುತ್ತಾರೆ. ಮುಂದುವರೆದು, ತಮ್ಮ ಸಾಕ್ಷಿಯಲ್ಲಿ ಸದರಿ ನೋಟುಗಳಿಗೆ ಫಿನಾಫ್ತಲಿನ್ ಪೌಡರನ್ನು ಲೇಪಿಸಿ ಪಂಚ ಸಾಕ್ಷಿಯಾದ ಶ್ರೀ. ದಯಾಬಂಧು ರವರ ಕೈಯಿಂದ ದೂರುದಾರರ ಶರ್ಟ್‌ನ ಜೇಬಿನಲ್ಲಿ ಇಡಿಸಿದ ನಂತರ, ದಯಾಬಂಧು ಇವರ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಸಿದಾಗ, ದ್ರಾವಣ ನೀಲಿ ಬಣ್ಣಕ್ಕೆ ತಿರುಗಿರುತ್ತದೆ ಎಂದು ನುಡಿದಿರುತ್ತಾರೆ. ಆದರೆ, ತನಿಖಾಧಿಕಾರಿಗಳು (ಪಿ.ಡಬ್ಲ್ಯೂ.3) ತಮ್ಮ ಮುಖ್ಯ ವಿಚಾರಣೆಯಲ್ಲಿ ಸದರಿ ಫಿನಾಫ್ತಲಿನ್ ಪೌಡರನ್ನು ಲೇಪಿಸಿದ ನೋಟುಗಳನ್ನು ಪಂಚ ಸಾಕ್ಷಿ ಶ್ರೀ. ಪ್ರಕಾಶ್ ರವರ ಏಣಿಸಿ ದೂರುದಾರರ ಶರ್ಟ್‌ನ ಎಡ ಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ ಮತ್ತು ಅವರ ಕೈಗಳನ್ನು ದ್ರಾವಣದಲ್ಲಿ ತೊಳೆಸಿದಾಗ ಅದರ ಬಣ್ಣ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಎಂದು ನುಡಿದಿರುತ್ತಾರೆ. ಪ್ರಾಯೋಗಿಕ ಪಂಚನಾಮೆಯನ್ನು ನಿ.ಪಿ.2 ಎಂದು

ಗುರುತಿಸಿಕೊಳ್ಳಲಾಗಿದೆ. ಇದನ್ನು ಪರಿಶೀಲಿಸಿದಾಗ ಶ್ರೀ. ದಯಾಬಂಧು ರವರ ಕೈಯಿಂದ ದೂರುದಾರರ ಶರ್ಟ್‌ನ ಜೇಬಿನಲ್ಲಿ ಇಡಿಸಿದ ನಂತರ, ದಯಾಬಂಧು ಇವರ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಸಿದಾಗ, ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಅಂತಾ ನಮೂದು ಇರುತ್ತದೆ. ಆದ್ದರಿಂದ, ತನಿಖಾಧಿಕಾರಿಗಳ ಸಾಕ್ಷಿಯು ನಿ.ಪಿ.2ಕ್ಕೆ ವಿರುದ್ಧವಾಗಿ ಇರುತ್ತದೆ.

34. ಮಂಡನಾಧಿಕಾರಿಗಳ ಪ್ರಕಾರ ನೆರಳು ಸಾಕ್ಷಿ ಶ್ರೀ. ಪ್ರಕಾಶ್ ಮತ್ತು ದೂರುದಾರರು ಶ್ರೀದೇವಿ ಹೋಟೆಲ್ ಒಳಗೆ ಹೋಗಿದ್ದು ಅಲ್ಲಿ ಆ.ಸ.ನೌ ರವರು ರೂ.2,800/– ಗಳನ್ನು ದೂರುದಾರರಿಂದ ಪಡೆದುಕೊಂಡಿರುತ್ತಾರೆ ಎಂದು ವಾದವಿರುತ್ತದೆ. ಆದರೆ ನೆರಳು ಸಾಕ್ಷಿ ಶ್ರೀ. ಪ್ರಕಾಶ್ ತಮ್ಮ ಮುಖ್ಯ ವಿಚಾರಣೆಯಲ್ಲಿ ದೂರುದಾರರು ಮತ್ತು ಅವರ ಸ್ನೇಹಿತ ಆ.ಸ.ನೌ ರವರ ಜೊತೆಗೆ ಹೋಟೆಲ್ ಒಳಗೆ ಹೋಗಿ ಒಂದು ಟೇಬಲ್ ಮೇಲೆ ಅವರು ಇನ್ನೊಂದು ಟೇಬಲ್‌ನಲ್ಲಿ ಕುಳಿತುಕೊಂಡಿದ್ದು, ಹೋಟೆಲ್ ಒಳಗೆ ಆ.ಸ.ನೌ ರವರು ದೂರುದಾರರ ಬಳಿ ಹಣ ಕೇಳಿ ಪಡೆದಿದ್ದು ತಾನು ನೋಡಿಲ್ಲವೆಂದು ನುಡಿದಿರುತ್ತಾರೆ. ಇವರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಇವರಿಗೆ ಆ.ಸ.ನೌ ರವರು ದೂರುದಾರರಿಂದ ಲಂಚದ ಹಣ ರೂ.2,800/– ಗಳನ್ನು ಪಡೆದು, ಏಣಿಸಿ ತನ್ನ ಶರ್ಟ್ ಜೇಬಿನಲ್ಲಿ ಇಟ್ಟುಕೊಂಡಿದ್ದು, ಅದನ್ನು ಇವರು ನೋಡಿರುತ್ತಾರೆ ಎಂದು ಮಾಡಿದ ಸಲಹೆಗೆ ಅವರು ಅಲ್ಲಗೆಳದಿರುತ್ತಾರೆ. ಕಾರಣ, ಮಂಡನಾಧಿಕಾರಿಗಳು ಆ.ಸ.ನೌ ರವರು ದೂರುದಾರರಿಂದ ಹಣ ಪಡೆದುಕೊಂಡಿರುತ್ತಾರೆ ಎನ್ನುವ ಬಗ್ಗೆ ದೂರುದಾರರಿಂದಗಲೀ ಅಥವಾ ನೆರಳು ಸಾಕ್ಷಿದಾರರಿಂದಾಗಲೀ ಸಾಬೀತು ಪಡಿಸಿರುವುದಿಲ್ಲ.

35. ತನಿಖಾಧಿಕಾರಿಗಳು ತಮ್ಮ ಮುಖ್ಯ ವಿಚಾರಣೆಯಲ್ಲಿ ಆ.ಸ.ನೌ ರವರನ್ನು ದಸ್ತಗಿರಿ ಮಾಡಿ, ತಹಶೀಲ್ದಾರ್ ಕಛೇರಿಗೆ ಕರೆದುಕೊಂಡು ಬಂದಾಗ, ಆ.ಸ.ನೌ ರವರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ಕೇಳಲಾಗಿ, ಆ.ಸ.ನೌ ರವರು ತನ್ನ ಶರ್ಟ್‌ನ ಎಡ ಭಾಗದ ಜೇಬಿನಲ್ಲಿ ಇರುತ್ತದೆ ಅಂತಾ ಹೇಳಿದ್ದು, ಪಂಚ ಸಾಕ್ಷಿಯಾದ ಶ್ರೀ. ಪ್ರಕಾಶ್ ರವರ ಅದನ್ನು ತೆಗೆದು

ಪರಿಶೀಲಿಸಿದಾಗ ಕೇವಲ ರೂ.2,700/- ಗಳು ಇದ್ದವು ಅಂತಾ ನುಡಿದಿರುತ್ತಾರೆ. ಇನ್ನೊಂದು ನೋಟಿನ ಬಗ್ಗೆ ಆ.ಸ.ನೌ ರವರನ್ನು ವಿಚಾರಿಸಲಾಗಿ ಅವರು ಶ್ರೀದೇವಿ ಹೋಟೆಲ್‌ನಲ್ಲಿ ರೂ.15/- ಗಳ ಬಿಲ್ಲನ್ನು ಪಾವತಿಸಿ ಉಳಿದ ರೂ.85/-ಗಳನ್ನು ದೂರುದಾರರಿಗೆ ಪೆಟ್ರೋಲ್ ಸಲುವಾಗಿ ಮರಳಿ ನೀಡಿರುತ್ತೇನೆ ಎಂದು ಹೇಳಿರುತ್ತಾರೆ ಅಂತಾ ನುಡಿದಿರುತ್ತಾರೆ. ಟ್ರಾಪ್ ಪಂಚನಾಮೆಯನ್ನು ನಿ.ಪಿ.3 ಎಂದು ಗುರುತಿಸಲಾಗಿದ್ದು, ಟ್ರಾಪ್ ಪಂಚನಾಮೆಯಲ್ಲಿ ಪುಟ ನಂ.5 ಕೊನೆಯ 6 ಸಾಲಿನಲ್ಲಿ ದೂರುದಾರರು ಹಣವನ್ನು ಆ.ಸ.ನೌ ರವರಿಗೆ ಕೊಟ್ಟ ನಂತರ ಆ.ಸ.ನೌ ರವರು ರೂ.100/- ಪೆಟ್ರೋಲ್‌ಗೆ ಅಂತಾ ಹೇಳಿದ್ದು, ಅದನ್ನು ತಾನು ಪಡೆದುಕೊಂಡಿದ್ದು ನಂತರ ಹೋಟೆಲ್ ಬಿಲ್ಲಿಗೆ ರೂ.15/-ಗಳನ್ನು ಹೋಟೆಲ್ ಕ್ಯಾಷಿಯರ್‌ಗೆ ಪಾವತಿಸಿ ಚಿಲ್ಲರೆ ರೂ.85/- ಗಳನ್ನು ವಾಪಸ್ಸು ಪಡೆದಿದ್ದು ಅಂತಾ ನಮೂದು ಇರುತ್ತದೆ. ಇಲ್ಲಿಯೂ ಸಹ ತನಿಖಾಧಿಕಾರಿಗಳ ಸಾಕ್ಷಿ ನಿ.ಪಿ.3ಗೆ ವಿರುದ್ಧವಾಗಿರುತ್ತದೆ.

36. ಪಿ.ಡಬ್ಲ್ಯೂ.3 ತನಿಖಾಧಿಕಾರಿಗಳ ಪ್ರಕಾರ ಆ.ಸ.ನೌ ರವರು ಹೋಟೆಲ್‌ನಲ್ಲಿ ದಸ್ತಗಿರಿ ಮಾಡಿದ ನಂತರ ಅಲ್ಲಿ ಯಾವುದೇ ಪ್ರಕ್ರಿಯೆಯನ್ನು ಮಾಡದೇ ನೇರವಾಗಿ ತಹಶೀಲ್ದಾರ್ ಕಛೇರಿಗೆ ಬಂದಿರುತ್ತಾರೆ ಅಂತಾ ನುಡಿದಿರುತ್ತಾರೆ. ಹೋಟೆಲ್‌ನಲ್ಲಿ ಈ 100 ರೂಪಾಯಿಯಲ್ಲಿ ರೂ.15/- ಗಳ ಬಿಲ್ಲಿನ ಹಣವನ್ನು ಕೊಟ್ಟು ಉಳಿದ ರೂ.85/- ಗಳನ್ನು ದೂರುದಾರರು ಇಟ್ಟುಕೊಂಡ ಬಗ್ಗೆ ವಿಚಾರಣೆಯನ್ನು ಮಾಡಿರುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ತನಿಖಾಧಿಕಾರಿಗಳು ಆ.ಸ.ನೌ ರವರಿಗೆ ಅವರ ಹೆಸರು, ವಿಳಾಸ ಮತ್ತು ಇತರೆ ವಿವರಣೆಯನ್ನು ಕೇಳಿ ತಿಳಿದುಕೊಂಡಿದ್ದು ಮತ್ತು ಆ.ಸ.ನೌ ರವರಿಗೆ ಲಂಚದ ಹಣವನ್ನು ಪಡೆದುಕೊಂಡ ಬಗ್ಗೆ ಕೇಳಬಹುದಾಗಿತ್ತು. ತನಿಖಾಧಿಕಾರಿಗಳು ಕೇವಲ ಅಲ್ಲಿ ಜನಸಂದಣಿ ಇರುವುದರಿಂದ ಯಾವುದೇ ಪ್ರಕ್ರಿಯೆ ಮಾಡಿರುವುದಿಲ್ಲ ಎಂದು ಹೇಳಿದ್ದರೂ ಸಹ ಆ.ಸ.ನೌ ರವರು ಹಣವನ್ನು ಪಡೆದುಕೊಂಡಿರುತ್ತಾರೆ ಅಥವಾ ಇಲ್ಲವೇ ಎಂಬುದರ ಬಗ್ಗೆ ವಿಚಾರಣೆ ಮಾಡಬಹುದಾಗಿತ್ತು, ಆದರೆ ಅವರು ವಿಚಾರಣೆ ಮಾಡಿರುವುದಿಲ್ಲ. ಈ ವಿಷಯದ ಬಗ್ಗೆ ದೂರುದಾರರನ್ನು ಸಹ ಹೇಳಬಹುದಾಗಿತ್ತು,

ದೂರುದಾರರ ಬಳಿ ಇದ್ದ ರೂ.85/- ಗಳನ್ನು ಜಪ್ತಿ ಮಾಡಿಕೊಂಡಿರುತ್ತಾರೆ ಅಥವಾ ಇಲ್ಲವೇ ಎಂಬುದರ ಬಗ್ಗೆಯೂ ಸಹ ಟ್ರಾಪ್ ಪಂಚನಾಮೆಯಲ್ಲಿ ಹೇಳಿರುವುದಿಲ್ಲ.

37. ಟ್ರಾಪ್ ಪಂಚನಾಮೆಯ ಪ್ರಕಾರ ಆ.ಸ.ನೌ ರವರನ್ನು ದಸ್ತಗಿರಿ ಮಾಡಿದಾಗ ಸಮಯ ಸಂಜೆ 5.50 ಗಂಟೆಯಾಗಿದ್ದು, ತಹಶೀಲ್ದಾರ್ ಕಛೇರಿಗೆ ಬಂದಾಗ ಸಂಜೆ 6.00 ಗಂಟೆ ಆಗಿತ್ತು ಅಂತಾ ನಮೂದು ಆಗಿರುತ್ತದೆ. ಅಲ್ಲಿ ಎಲ್ಲಾ ಪ್ರಕ್ರಿಯೆಗಳನ್ನು ಮುಗಿಸಿ ಸದರಿ ರೂ.100/- ಗಳ ನೋಟಿನ ಬಗ್ಗೆ ವಿಚಾರಣೆ ಮಾಡಲು ಆ.ಸ.ನೌ, ದೂರುದಾರರು, ಪಂಚರು ಮತ್ತು ತನಿಖಾಧಿಕಾರಿಗಳು ಹೋಟೆಲ್‌ಗೆ ಹೋದಾಗ ರಾತ್ರಿ 7.40 ಗಂಟೆಯಾಗಿತ್ತು ಅಂತಾ ನಮೂದು ಇರುತ್ತದೆ. ಅಲ್ಲಿ ಹೋಟೆಲ್ ಕ್ಯಾಷಿಯರ್‌ಗೆ ವಿಚಾರಣೆ ಮಾಡಿ ರೂ.100/- ಗಳನ್ನು ಪಂಚ ಸಾಕ್ಷಿಯು ಗುರುತಿಸಿ ತೆಗೆದುಕೊಟ್ಟಿದ್ದು, ಸದರಿ ರೂ.100/- ನೋಟು ಲಂಚದ ಹಣ ಸ್ವೀಕರಿಸಿದ್ದ ಒಂದು ನೋಟು ಆಗಿದ್ದು, ಅದನ್ನು ಖಾಲಿ ಲಕೋಟೆಯಲ್ಲಿ ಹಾಕಿ ಸೀಲು ಮಾಡಿ ವಶಕ್ಕೆ ತೆಗೆದುಕೊಂಡಿರುತ್ತಾರೆ ಅಂತಾ ನಮೂದು ಇರುತ್ತದೆ. ನಂತರ ಹೋಟೆಲ್ ಕ್ಯಾಷಿಯರ್ ಕ್ಯಾಷ್ ಕೌಂಟರ್‌ನ ಟೇಬಲ್ ಮೇಲೆ ಒಂದು ಪ್ಲಾಸ್ಟಿಕ್ ಬಾಟಲಿಗೆ ನೀರನ್ನು ಹಾಕಿ ಅದಕ್ಕೆ ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ಬೆರೆಸಿ ದ್ರಾವಣ ತಯಾರಿಸಿ ಅದರಲ್ಲಿ ಶ್ರೀ. ಚಂದ್ರಶೇಖರ್ ರವರ ಬಲಗೈ ಮತ್ತು ಎಡಗೈ ಬೆರಳುಗಳನ್ನು ಬಟ್ಟಲಿನಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಅಂತಾ ನಮೂದು ಇರುತ್ತದೆ. ಈ ಎಲ್ಲಾ ಪ್ರಕ್ರಿಯೆಗಳನ್ನು ಹೋಟೆಲ್‌ನಲ್ಲಿ ಮಾಡಲು ತೊಂದರೆ ಇಲ್ಲದಿದ್ದಾಗ ಆ.ಸ.ನೌ ರವರನ್ನು ದಸ್ತಗಿರಿ ಮಾಡಿದಾಗ ಅಲ್ಲಿ ಯಾವುದೇ ಪ್ರಕ್ರಿಯೆಯನ್ನು ಮಾಡಲು ಏಕೆ ಆಗಿರುವುದಿಲ್ಲ ಎಂದು ನಂಬಲು ಕಷ್ಟಸಾಧ್ಯವಾಗಿರುತ್ತದೆ. ಅಲ್ಲದೇ, ಪಿ.ಡಬ್ಲ್ಯೂ.3 ರವರು 2 ಗಂಟೆಗಳ ನಂತರ ಮತ್ತೇ ಹೋಟೆಲ್‌ಗೆ ಹೋದಾಗ ಸದರಿ 100 ರೂಪಾಯಿ ನೋಟು ಇನ್ನು ಹಾಗೆ ಇತ್ತು ಎನ್ನುವ ಬಗ್ಗೆ ನಂಬಲು ಕಷ್ಟಸಾಧ್ಯವಾಗಿರುತ್ತದೆ. ಈ ಬಗ್ಗೆ ಅಲ್ಲಿ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ. ಆದರೆ ಅದನ್ನು ಒಂದು ಟ್ರಾಪ್ ಪಂಚನಾಮೆಯ ಒಂದು ಭಾಗವಾಗಿ ಮಾಡಿದಂತೆ ಕಾಣುತ್ತದೆ.

38. ತನಿಖಾಧಿಕಾರಿಗಳ ಪ್ರಕಾರ ಟ್ರಾಪ್ ಪಂಚನಾಮೆಯನ್ನು ಮಾಡುವಾಗ ದೂರುದಾರರು ಮತ್ತು ಆ.ಸ.ನೌ ರವರ ನಡುವೆ ಹೋಟೆಲ್‌ನಲ್ಲಿ ನಡೆದಿರುವ ಸಂಭಾಷಣೆಯು ವಾಯ್ಸ್ ರೆಕಾರ್ಡ್‌ರ್‌ನಲ್ಲಿ ದಾಖಲಾಗಿದ್ದು, ಸದರಿ ಸಂಭಾಷಣೆಯ ಡಾಟಾವನ್ನು ಲಾಪ್‌ಟಾಪ್ ಮುಖಾಂತರ ಸಿ.ಡಿಗೆ ವರ್ಗಾಯಿಸಿ, ಸದರಿ ಸಿ.ಡಿಗೆ ಪಂಚರ ಸಹಿ ಪಡೆದು, ಸದರಿ ಸಿ.ಡಿಯನ್ನು ಸೀಲು ಮಾಡದೇ ಸದರಿ ಧ್ವನಿಯನ್ನು ಆ.ಸ.ನೌ ರವರ ಮೇಲಾಧಿಕಾರಿಯಿಂದ ಗುರುತಿಸುವ ಸಲುವಾಗಿ ವಶದಲ್ಲಿ ಇಟ್ಟುಕೊಳ್ಳಲಾಗಿತ್ತು ಅಂತಾ ನಮೂದು ಇರುತ್ತದೆ. ಈ ಸಂಭಾಷಣೆಯ ವಿವರದ ಬಗ್ಗೆ ದಾಖಲಿಸಿಕೊಳ್ಳಲಾಯಿತು ಅಂತಾ ನುಡಿದಿದ್ದು, ಟ್ರಾಪ್ ಪಂಚನಾಮೆಯನ್ನು ಪರಿಶೀಲಿಸಲಾಗಿ, ಈ ಸಂಭಾಷಣೆಯ ವಿವರ ಕಂಡು ಬರುವುದಿಲ್ಲ. ಪ್ರಾಯೋಗಿಕ ಪಂಚನಾಮೆಯಲ್ಲಿ ನಮೂದು ಮಾಡಿದ ಸಂಭಾಷಣೆಯ ವಿವರಣೆ ಕಂಡುಬರುತ್ತದೆ ಹೊರತಾಗಿ ಹೋಟೆಲ್‌ನಲ್ಲಿ ನಡೆದ ಸಂಭಾಷಣೆಯ ಬಗ್ಗೆ ವಿವರಣೆ ಇರುವುದಿಲ್ಲ. ಈ ಬಗ್ಗೆ ತನಿಖಾಧಿಕಾರಿಗಳು ತಮ್ಮ ಸಾಕ್ಷಿಯಲ್ಲಿ ಏಕೆ ದಾಖಲು ಆಗಿರುವುದಿಲ್ಲ ಎಂಬುದರ ಬಗ್ಗೆ ವಿವರಣೆ ನೀಡಿರುವುದಿಲ್ಲ.

39. ಈ ಮೇಲಿನ ವಿಚಾರಣೆಗೆ ಸಂಬಂಧಪಟ್ಟಂತೆ ದೂರುದಾರರ ಹೇಳಿಕೆಯನ್ನು ದಿನಾಂಕ: 20/09/2013 ರಂದು ದಾಖಲಿಸಿಕೊಂಡಿದ್ದು, ಆತನು ತನ್ನ ಹೇಳಿಕೆಯಲ್ಲಿ ಶ್ರೀದೇವಿ ಹೋಟೆಲ್‌ನಲ್ಲಿ ದೂರುದಾರರು ಮತ್ತು ಆ.ಸ.ನೌ ರವರ ನಡುವೆ ಮಾತನಾಡಿದ ಸಂಭಾಷಣೆಯ ವಿವರದ ಬದಲಾಗಿ ಕೈತಪ್ಪಿನಿಂದ ಪ್ರಾಯೋಗಿಕ ಪಂಚನಾಮೆಯಲ್ಲಿ ನಮೂದಿಸಿರುವ ಸಂಭಾಷಣೆಯ ವಿವರವನ್ನು ಟ್ರಾಪ್ ಪಂಚನಾಮೆಯಲ್ಲಿ ನಮೂದಿಸಿರುತ್ತದೆ. ದಿನಾಂಕ: 20/09/2013 ರಂದು ತುಮಕೂರು ಲೋಕಾಯುಕ್ತ ಠಾಣೆಯಲ್ಲಿ ಆ.ಸ.ನೌ ರವರ ಮೇಲಾಧಿಕಾರಿಗಳಾದ ಚಿಕ್ಕನಾಯಕನಹಳ್ಳಿಯ ತಹಶೀಲ್ದಾರ್ ಶ್ರೀಮತಿ. ಕಾಮಾಕ್ಷಮ್ಮ ರವರು ಈ 3 ಸಂಭಾಷಣೆಯಲ್ಲಿ ಆ.ಸ.ನೌ ರವರ ಧ್ವನಿಯನ್ನು ಗುರುತಿಸಿದ್ದು ಆ ಸಮಯದಲ್ಲಿ ತಾನು ಹಾಜರಿರುತ್ತೇನೆ ಅಂತಾ ಹೇಳಿರುತ್ತಾರೆ. ಹೋಟೆಲ್‌ನಲ್ಲಿ ನಡೆದ ಸಂಭಾಷಣೆ ವಿವರವನ್ನು ನಿ.ಪಿ.11 ಎಂದು ಗುರುತಿಸಲಾಗಿರುತ್ತದೆ. ಸದರಿ ಸಂಭಾಷಣೆಯಲ್ಲಿ ಬರೆದ ವಿಷಯವನ್ನು ಆ.ಸ.ನೌ ರವರಿಗೆ ಕೇಳಿ ತಿಳಿಸಲಾದ ಬಗ್ಗೆ ವಿವರಣೆ ಇರುವುದಿಲ್ಲ. ಕೇವಲ ಕೈತಪ್ಪಿನಿಂದ ಈ ರೀತಿ ಟ್ರಾಪ್

ಪಂಚನಾಮೆಯಲ್ಲಿ ಆಗಿರುತ್ತದೆ ಎನ್ನುವ ಬಗ್ಗೆ ನಂಬಲು ಸಾಧ್ಯವಾಗಿರುವುದಿಲ್ಲ. ಏಕೆಂದರೆ, ಪಂಚನಾಮೆಯನ್ನು ಬರೆದಾದ ನಂತರ ಅದರಲ್ಲಿ ಬರೆದ ವಿಷಯನ್ನು ಪಂಚರಿಗೆ, ದೂರುದಾರರಿಗೆ, ಆ.ಸ.ನೌ ರವರಿಗೆ ಓದಿ ಹೇಳಿ ಸಹಿ ಪಡೆದುಕೊಂಡಿರುತ್ತದೆ ಅಂತಾ ನಮೂದು ಇರುತ್ತದೆ. ಒಂದು ವೇಳೆ ಇದರಲ್ಲಿ ಬರೆದ ವಿಷಯನ್ನು ಓದಿ ಹೇಳಿದ್ದೇ ಆಗಿದ್ದರೆ ತಪ್ಪಾದ ವಿಷಯವನ್ನು ಅದೇ ದಿನ ಗಮನಕ್ಕೆ ಬರುತ್ತಿತ್ತು. ಆದ್ದರಿಂದ, ನನ್ನ ಅಭಿಪ್ರಾಯದಲ್ಲಿ ಇದು ಕೈತಪ್ಪಿನಿಂದ ಆಗಿರುತ್ತದೆ ಎನ್ನುವ ಬಗ್ಗೆ ನಂಬಲು ಸಾಧ್ಯವಾಗಿರುವುದಿಲ್ಲ.

40. ತನಿಖಾಧಿಕಾರಿಗಳು (ಪಿ.ಡಬ್ಲ್ಯೂ.3) ರವರು ತಮ್ಮ ಪಾಟಿ ಸವಾಲಿನಲ್ಲಿ ಆ.ಸ.ನೌರವರ ಬಳಿಯಲ್ಲಿ ದಿನಾಂಕ: 19/09/2013 ರಂದು ದೂರುದಾರರಿಗೆ ಸಂಬಂಧಪಟ್ಟ ಬರವಣಿಗೆಯ ಮೂಲಕ ಮಾಡಬಹುದಾದ ಯಾವುದೇ ಸರ್ಕಾರಿ ಕೆಲಸ ಬಾಕಿ ಇರಲಿಲ್ಲವೆಂದು ಹಾಗೂ ದೂರುದಾರರು ಆ.ಸ.ನೌರವರಲ್ಲಿ ವ್ಯವಸಾಯ ದೃಢೀಕರಣ ಪತ್ರ ಕೊಡಬೇಕೆಂದು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಅಲ್ಲದೇ, ಪ್ರಾಯೋಗಿಕ ಪಂಚನಾಮೆ ಮತ್ತು ಟ್ರಾಪ್ ಪಂಚನಾಮೆಯಲ್ಲಿ ದೂರುದಾರರು ಯಾವ ರೀತಿ ಸೂಚನೆ ಕೊಡಬೇಕು ಎನ್ನುವ ಬಗ್ಗೆ ವ್ಯತ್ಯಾಸಗಳು ಇರುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ. ಪ್ರಾಯೋಗಿಕ ಪಂಚನಾಮೆಯಲ್ಲಿ ದೂರುದಾರರಿಗೆ ತನ್ನ ಬಳಿಯೇ ಇರುವ ಕರವಸ್ತ್ರವನ್ನು ತೆಗೆದು ಅವರ ಮುಖವನ್ನು ಒರೆಸಿಕೊಳ್ಳುವುದರ ಮೂಲಕ ನಿಗದಿತ ಸೂಚನೆ ನೀಡಬೇಕೆಂದು ನಮೂದು ಇರುತ್ತದೆ. ಟ್ರಾಪ್ ಪಂಚನಾಮೆಯ ಪ್ರಕಾರ ದೂರುದಾರರರು ಹೋಟೆಲ್ ಹೊರಗಡೆ ಬಂದಾಗ ಪಂಚನಾಮೆ ಕಾಲಕ್ಕೆ ತನಗೆ ನೀಡಿದ ತನ್ನ ಜೇಬಿನಲ್ಲಿರುವ ಪೆನ್ನನ್ನು ಹೊರಗೆ ತೆಗೆದು ತೋರಿಸುವ ಮೂಲಕ ನಿಗಧಿತ ಸೂಚನೆಯನ್ನು ನೀಡಿದನು ಎಂದು ನಮೂದು ಇರುತ್ತದೆ. 2 ಪಂಚನಾಮೆಗಳನ್ನು ಪರಿಶೀಲಿಸಿದಾಗ, ಸೂಚನೆ ನೀಡುವ ಬಗ್ಗೆ ವ್ಯತ್ಯಾಸ ಇರುತ್ತದೆ.

41. ದೂರನ್ನು ಪರಿಶೀಲಿಸಿದಾಗ ಅದರಲ್ಲಿ ಮೊಟ್ಟಮೊದಲನೆಯ ಬಾರಿಗೆ ದೂರುದಾರ ಮತ್ತು ಆತನ ಸ್ನೇಹಿತ ಆ.ಸ.ನೌ ರವರನ್ನು ಭೇಟಿಯಾಗಲು ಹೋದಾಗ ಆ.ಸ.ನೌ ರವರು ಅರ್ಜಿ ಮತ್ತು

ದಾಖಲಾತಿಯನ್ನು ಕೊಟ್ಟರೆ ನಿಮಗೆ ಬಹಳ ತಿಂಗಳು ಸಮಯ ಬೇಕಾಗುತ್ತದೆ, ನೀವು ಅರ್ಜಿಯನ್ನು ಕೊಡಬೇಡಿ ನನಗೆ ಹಣವನ್ನು ಕೊಟ್ಟರೆ ಮಾಡಿಕೊಡುತ್ತೇನೆ ಅಂತಾ ನಮೂದು ಇರುತ್ತದೆ. ದೂರುದಾರರ ಪ್ರಕಾರ ಅಲ್ಲಿ ತನ್ನ ಸ್ನೇಹಿತನಾದ ರವೀಂದ್ರ ರವರ ಮೊಬೈಲ್‌ನಲ್ಲಿ ಮಾತಾನಾಡಿದ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಂಡಿರುತ್ತಾರೆ ಅಂತಾ ನಮೂದು ಇರುತ್ತದೆ. ಇದನ್ನು ಗಮನಿಸಿದಾಗ ಆ.ಸ.ನೌ ರವರು ಈ ಮೊದಲೆ ಹಣವನ್ನು ಕೇಳುತ್ತಾರೆ ಎನ್ನುವ ಬಗ್ಗೆ ಭಾವಿಸಿಕೊಂಡು ಹೋದಂತೆ ಕಾಣುತ್ತದೆ ಮತ್ತು ಮೊಬೈಲ್ ಅನ್ನು ಯಾವ ವೇಳೆಯಲ್ಲಿ ಆನ್ ಮಾಡಲಾಯಿತು ಅಂತಾ ಮಾಹಿತಿ ಇರುವುದಿಲ್ಲ. ಒಂದು ವೇಳೆ ಇವರು ಆನ್ ಮಾಡಿಕೊಂಡು ಆತನ ಕಛೇರಿಗೆ ಹೋಗಿದ್ದೇ ಆದರೆ ಮೊದಲಿನಿಂದಲೂ ಅವರ ನಡುವೆ ಏನು ಸಂಭಾಷಣೆಯಾಗಿರುತ್ತದೆ ಅಂತಾ ಗೊತ್ತಾಗುತ್ತಿತ್ತು. ಈ ಬಗ್ಗೆ ಯಾವುದೇ ವಿವರಣೆಯನ್ನು ತನಿಖಾಧಿಕಾರಿಗಳು ದಾಖಲು ಮಾಡಿಕೊಂಡಿರುವುದಿಲ್ಲ.

42. ತನಿಖಾಧಿಕಾರಿಗಳು ಆ.ಸ.ನೌ ಮತ್ತು ದೂರುದಾರರ ನಡುವೆ ಆದ ಕಾಲ್ ರೆಕಾರ್ಡ್‌ಗಳನ್ನು ತರಿಸಿಕೊಂಡಿರುತ್ತಾರೆ ಅಂತಾ ಹೇಳಿದ್ದು ಮತ್ತು ಆ ಪ್ರಕಾರ ಅವರಿಬ್ಬರ ನಡುವೆ ಯಾವ ವೇಳೆಯಲ್ಲಿ ಮಾತುಕತೆಯಾಗಿತು ಎನ್ನುವ ಬಗ್ಗೆ ದಾಖಲಾತಿಯನ್ನು ಹಾಜರು ಮಾಡಿರುತಾರೆ. ಆದರೆ, ನಿ.ಪಿ.9 ರಿಂದ ನಿ.ಪಿ.11 ರಲ್ಲಿ ಇಬ್ಬರ ಮೊಬೈಲ್ ನಂಬರ್ ನಮೂದು ಇರುವುದಿಲ್ಲವೆಂದು ತನಿಖಾಧಿಕಾರಿಗಳು ಒಪ್ಪಿಕೊಂಡಿರುತ್ತಾರೆ. ಒಂದು ವೇಳೆ ಅವರಿಬ್ಬರೂ ಮಾತನಾಡಿರುತ್ತಾರೆ ಎಂದು ಒಪ್ಪಿಕೊಂಡಿದ್ದರೂ ಸಹಿತ ಲಂಚದ ಹಣವನ್ನು ಕೊಟ್ಟ ಬಗ್ಗೆ ಮತ್ತು ಪಡೆದುಕೊಂಡ ಬಗ್ಗೆ ಶಿಸ್ತು ಪ್ರಾಧಿಕಾರವು ನನ್ನ ಅಭಿಪ್ರಾಯದಲ್ಲಿ ರುಜುವಾತುಪಡಿಸಿರುವುದಿಲ್ಲ.

43. Advocate for DGO has relied upon the ruling reported in 2018(1) Kar.L.J. 605 (DB) (Umesh S/o Vittal Biradar vs. The State of Karnataka) wherein it is held that *(A) KARNATAKA CIVIL SERVICES (CONDUCT) RULES, 1966, Rule 3(1) – Karnataka Civil Services (Classification, Control and Appeal)*

*Rules, 1957, Rulel 8(vi) – Constitution of India, Articles 226 and 227 – Misconduct – Alleged demand and acceptance of bribe for official favour – Finding of guilt recorded by Enquiry Officer and recommendation of Lokayukta – Punishment of compulsory retirement – Earlier finding by Criminal Court acquitting employee-accused on similar charges, on basis of similar set of evidence – Effect – Held, mere complaint, in the absence of corroboration by its author, inviting inference that petitioner demanded and received bribe amount – Illogical, skeptical and perverse – Registration of FIR by itself, shall not amount to proof of commission of offence – That is not in the scheme of either criminal jurisprudence or service law – In factual matrix, a finding of guilt recorded by Enquiry Officer – Not based on any incriminating evidence – Whole exercise of Enquiry Officer was based only on complaint averments and evidence of shadow witness – Petitioner never disputed possession of tainted notes with him – His explanation that the amount was due to him from the moment he was trapped – Complainant himself turned hostile to his own complaint – Therefore, the inference drawn by the Disciplinary Authority that it was an improvement and a subsequent concocted theory on the part of the petitioner, which was not based on any tangible evidentiary material – Is definitely perverse – Therefore, finding of guilt about violation of Rule 3(1) of the*

*Rules 1966 – Not tenable – Consequently, subsequent punishment of compulsory retirement would not stand, set aside – Direction of reinstate petitioner into service with continuity of service, without back wages.*

44. ಈ ವಿಚಾರಣೆಯಲ್ಲಿ ಆ.ಸ.ನೌರವರು ತನಿಖಾಧಿಕಾರಿಗಳಿಗೆ ನಿ.ಪಿ.4 ರಂತೆ ಹೇಳಿಕೆ ಕೊಟ್ಟಿದ್ದು, ಅದರಲ್ಲಿ ದೂರುದಾರರು ಬಲವಂತವಾಗಿ ತನ್ನ ಜೇಬಿನಲ್ಲಿ ಹಣ ಇಟ್ಟಿರುತ್ತಾರೆ ಅಂತಾ ಹೇಳಿದ್ದು, ಹಣವನ್ನು ಏಕೆ ಇಟ್ಟಿದೆ ಎಂದು ಕೇಳಿದಾಗ, ಇರಲಿ ಇಟ್ಟುಕೊ ಅಂತಾ ಹೇಳಿದನು. ನಂತರ ಲೋಕಾಯುಕ್ತ ಪೋಲಿಸರು ಬಂದು ತನ್ನನ್ನು ಕರೆದುಕೊಂಡು ಹೋಗಿರುತ್ತಾರೆ ಅಂತಾ ನಮೂದು ಇರುತ್ತದೆ. ತನಿಖಾಧಿಕಾರಿಗಳ ಪಾಟಿಸವಾಲಿನಲ್ಲಿ ಸದರಿ ದಾಖಲಾತಿಯನ್ನು ಒತ್ತಾಯ ಪೂರ್ವಕವಾಗಿ ಪಡೆದುಕೊಂಡಿರುತ್ತೀರ ಅಂತಾ ಮಾಡಿದ ಸಲಹೆಗೆ ಅಲ್ಲಗಳೆದಿರುತ್ತಾರೆ. ಈ ಪ್ರಕರಣದಲ್ಲಿ ದೂರುದಾರರು ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷಿಯಾಗಿ ಸಾಕ್ಷಿ ನುಡಿದಿದ್ದು, ನೆರಳು ಸಾಕ್ಷಿದಾರರು ದೂರುದಾರರು ಹಣ ಕೊಟ್ಟಿರುತ್ತಾರೆ ಮತ್ತು ಅದನ್ನು ಆ.ಸ.ನೌ ರವರು ಪಡೆದುಕೊಂಡಿರುತ್ತಾರೆ ಎನ್ನುವುದನ್ನು ತಾನು ನೋಡಿರುವುದಿಲ್ಲ ಅಂತಾ ನುಡಿದ ಕಾರಣ ಶಿಸ್ತು ಪ್ರಾಧಿಕಾರ ಆ.ಸ.ನೌ ರವರು ಲಂಚದ ಹಣ ಪಡೆದುಕೊಂಡ ಬಗ್ಗೆ ತನಿಖಾಧಿಕಾರಿಗಳನ್ನು ಹೊರತುಪಡಿಸಿ ಯಾವುದೇ ಸಾಕ್ಷಿ ಇರುವುದಿಲ್ಲ ಮತ್ತು ಈ ಮೇಲೆ ಚರ್ಚಿಸಿದಂತೆ ತನಿಖಾಧಿಕಾರಿಗಳ ಸಾಕ್ಷಿಯು ಸಹ ಸಾಕ್ಷಿಯಲ್ಲಿ ವಿರೋಧಾಭಾಸಗಳು ಇರುತ್ತವೆ.

45. ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ-1ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

46.ಅಂಶ-2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಆದೇಶ

ಆ.ಸ.ನೌಕರ **ಶ್ರೀ. ಹೆಚ್.ಬಿ ಬಸವರಾಜು,** ಉಪ ತಹಶೀಲ್ದಾರ್, ನಾಡ ಕಛೇರಿ, ಹುಳಿಯಾರು, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ವಿಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

**ಆ.ಸ.ನೌರವರ ನಿವೃತ್ತಿ ದಿನಾಂಕ: 31/10/2015 ಆಗಿರುತ್ತದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

20/12

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. Naveen Kumar S/o Govinda Bhovi, Padakegudlu, Chikkanayakanahalli Taluk. |
| | **PW-2** | Sri. R Prakash S/o Rangappa, SDA, PWD, Tiptur. |
| | **PW-3** | Sri. M.R Goutham, Dy.SP, KLA, Ramanagar. |
| 2 | **Documents marked on behalf of the Disciplinary Authority Ex.P-1 to Ex.P-29** | |
| | **Ex.P.1 & 1(a)** | Complaint dtd: 19/09/2013 given to PI, KLA, Tumkur with Signature. |
| | **Ex.P.2, 2(a) & 2(b)** | Practical Mahazar with Signatures. |
| | **Ex.P.3 (a) & 3 (b)** | Trap Mahazar with Signatures. |
| | **Ex.P.4 & 4(a)** | Letter addressed to PI, KLA, Tumkur with Signature. |
| | **Ex.P.5** | Statement of complainant. |
| | **Ex.P.6** | Further statement of complainant. |
| | **Ex.P.7** | FIR. |
| | **Ex.P.8** | List of currency note numbers. |
| | **Ex.P.9, 9(a) & 9(b)** | Phone conversation details with Signatures. |

| | | |
|---|---|---|
| | **Ex.P.10, 10(a) & 10(b)** | Phone conversation details with Signatures. |
| | **Ex.P.11, 11(a) & 11(b)** | Phone conversation details with Signatures. |
| | **Ex.P.12** | Details of DGO submitted by Tahasildar, Chikkanayakanahalli Taluk to PI, KLA, Tumkur. |
| | **Ex.P.13** | Letter dtd: 21/09/2013 submitted by Tahasildar, Chikkanayakanahalli Taluk to PI, KLA, Tumkur. |
| | **Ex.P.14** | Khata extract. |
| | **Ex.P.15** | Police Notice issued to complainant. |
| | **Ex.P.16** | RTC. |
| | **Ex.P.17** | Letter dtd: 08/10/2013 addressed to SP-1, KLA, Bengaluru. |
| | **Ex.P.18** | Letter dtd: 13/03/2014 addressed to SP-1, KLA, Bengaluru. |
| | **Ex.P.19** | SDR. |
| | **Ex.P.20** | CDR. |
| | **Ex.P.21** | SDR. |
| | **Ex.P.22** | CDR. |
| | **Ex.P.23** | Ganga Tours & Travels credit bill. |
| | **Ex.P.24** | Letter dtd: 27/09/2013 addressed to Chemist, Bengaluru. |
| | **Ex.P.25** | Chemical Test Report. |
| | **Ex.P.26** | Letter of AEE, PWD Sub Division, |

| | | |
|---|---|---|
| | | Chikkanayakanahalli. |
| | **Ex.P.27** | Sketch Map. |
| | **Ex.P.28** | Sketch Map. |
| | **Ex.P.29** | Photographs. |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. Basavaraju H.B S/o Beeraiah, Retired Deputy Tahasildar, Hosahalli, Tiptur Taluk, Tumkur District. |
| 4 | **Documents marked on behalf of the DGOs through the complainant** | |
| | **Ex.D.1** | VII Addl. Sessions & Special Judge, Tumkur judgment No.Special Case No.526/2014. |

Dated this the 20th December, 2021

Sd/- 20/12

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.